ಅಧ್ಯಕ್ಷರು :—ಖಂಡ 2ರಿಂದ ಶಿರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ ಶಿರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಹಿತ ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವನೆಯನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮಿಸಾಗರ್ (ಕಾನೂನು ಮತ್ತು ನಗರಾಭಿವೃದ್ಧಿ ಸಚಿವರು).—ಗೌರವ ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಕಾನೂನು (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.''

ಅಧ್ಯಕ್ಷರು.—''ಗೌರವ ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಕಾನೂನು (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

THE KARNATAKA CO-OPERATIVE SOCIETIES (AMENDMENT) BILL, 1985.

Motion to Consider.

4-30 P. M.

SRI R. L. JALAPPA (Minister for Co-operation).—Sir, I beg to move.

''That the Karnataka Co-operative Societies (Amendment) Bill, 1985, be taken into consideration.''

The Question was proposed.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ೧೯೭೬ರಲ್ಲಿ ರಾಷ್ಟ್ರೀಯ ಭೂ ಅಭಿವೃದ್ಧಿ ಬ್ಯಾಂಕ್‌ಗಳ ಫೆಡರೇಶನ್‌ನವರು ಒಂದು ಸಲಹೆ ಮಾಡಿದ್ದರು. ೨೯-೬೦ ರಿಂದ ರಾಜ್ಯ ಸರಕಾರ ಒಂದು ರಿವಾಲ್ವಿಂಗ್ ಫಂಡ್ ಎಂದು ಮಾಡಿ, ಯಾರು ವಿಲ್‌ಫುಲ್ ಡಿಫಾಲ್ಟರ್ಸ್ ಇದ್ದಾರೆ, ಅವರ ಆಸ್ತಿ, ಪಾಸ್ತಿಗಳನ್ನು ಹರಾಜಿನಲ್ಲಿ ಕೊಂಡುಕೊಳ್ಳುವುದಕ್ಕೆ ಅಂದಿನ ಸರಕಾರ ಒಂದು ಆಜ್ಞೆಯನ್ನು ಮಾಡಿತ್ತು, ಆದರೆ ಕಾನೂನನ್ನು ಮಾಡಿರಲಿಲ್ಲ ಆಜ್ಞೆಯನ್ನು ಮಾಡಿ ಅದನ್ನು ಜಾರಿಗೆ ತಂದಿದ್ದರು. ಆದ. ಅದರಿಂದ ತೊಂದರೆ ಏನಾಯಿತು ಅಂದರೆ ಹಾಗೆ ಕೊಂಡು ಕೊಡಜಮೀನನ್ನು ಭೂರಹಿತರಿಗೆ ಕೊಡಬೇರೆ ಕೆಂದುಹೇಳಿ ತೀರ್ಮಾನ ತೆಗೆದುಕೊಂಡರು. ಇದರ ಜೊತೆಗೆ ಜಿಲ್ಲಾಧಿಕಾರಿಗಳು ಹರಾಜಿನಲ್ಲಿ ಜಮೀನನ್ನ ಪಡೆದಿದ್ದರೆ ಅದನ್ನು ಹಿಂದಿನ ಭೂಮಾಲೀಕರಿಂದ ಬಿಡಿಸುವುದಕ್ಕೆ ಆಗಲಿಲ್ಲ. ಆದುದರಿಂದ ಆ ಒಂದು ಸರಕಾರಿ ಆಜ್ಞೆಗೆ ಗೌರವ ಇಲ್ಲದ ಹಾಗೆ ಆಯಿತು. ಒಂದು ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಜಮೀನು ಪಡೆದರೂ ಸಹ ಬಹಳಷ್ಟು ಜನಗಳ ಜಮೀನು ಬಿಡಿಸಲಿಕ್ಕೆ ಸಾಧ್ಯವಾಗಲಿಲ್ಲ. ಆದಕ್ಕೆ

ಮೊದಲು ಒಂದು ಅಂಕಿಅಂಶವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ಅಲ್ಪಾವಧಿ ಮತ್ತು ದೀರ್ಘಾವಧಿಯಲ್ಲಿ, ೧೯೮೨-೮೩ರಲ್ಲಿ ಸುಮಾರು, ೧೧೪ ಕೋಟಿ ರೂಪಾಯಿಗಳನ್ನು ಸಾಲವಾಗಿ ಕೊಡಲಾಯಿತು. ೧೯೮೩-೮೪ರಲ್ಲಿ ೧೬೭.೬೯ ಕೋಟಿ ರೂಪಾಯಿಗಳನ್ನು ಕೊಡಲಾಯಿತು. ೧೯೮೨-೮೩ರಲ್ಲಿ ೧೧೪.೧೧ ಕೋಟಿಗಳನ್ನು ಕೊಡಲಾಯಿತು. ೧೯೮೩-೮೪ರಲ್ಲಿ ೧೪೭.೬೯ ಕೋಟಿಗಳಾಯಿತು. ೧೯೮೪-೮೫ರಲ್ಲಿ ೧೫೦.೧೦ ಕೋಟಿ ರೂಗಳಾಯಿತು ಅಂದರೆ, ಸಾಲ ಕೊಡುತ್ತಾ ಇರುವುದು ವರ್ಷ ವರ್ಷ ಹೆಚ್ಚುತ್ತಾ ಇದೆ. ಹಾಗೆಯೇ ಇದರ ಜೊತೆಗೆ ಡಿಪಾಸಿಟ್ಸ್, ೧೯೮೨-೮೩ರಲ್ಲಿ ೨೪೨.೬೦ ಕೋಟಿಗಳು ಜಿಲ್ಲಾ ಬ್ಯಾಂಕ್‌ಗಳು ಮತ್ತು ಅಪೆಕ್ಸ್ ಬ್ಯಾಂಕ್‌ಗಳಲ್ಲಿ ಡಿಪಾಸಿಟ್ಸ್, ೧೯೮೩-೮೪ರಲ್ಲಿ ೨೯೩.೧೨ ಕೋಟಿ ರೂಪಾಯಿಗಳು ಆಯಿತು. ೧೯೮೪-೮೫ರಲ್ಲಿ ೩೩೨.೭೩ ಕೋಟಿ ರೂಪಾಯಿಗಳಷ್ಟು ಡಿಪಾಸಿಟ್ ಆಗಿದೆ. ನಾವು ಈ ಮಧ್ಯೆ ನಬಾರ್ಡ್‌ನಿಂದ ಪಡೆದ ಹಣ ೧೯೮೨-೮೩ರಲ್ಲಿ ೪೪.೨೫ ಕೋಟಿ ರೂಪಾಯಿ ಗಳು. ೧೯೮೩-೮೪ ರಲ್ಲಿ ೬೪೭೦ ಕೋಟಿ ರೂಪಾಯಿಗಳು ೧೯೮೪-೮೫ರಲ್ಲಿ ೬೪.೨೦ ಕೋಟಿ ರೂಪಾಯಿಗಳು. ನಾವು ೧೫೮ ಕೋಟಿ ರೂಪಾಯಿಗಳಷ್ಟು ಹಣವನ್ನು ೧೯೮೪-೮೫ರಲ್ಲಿ ಕೊಟ್ಟಿದ್ದರೂ ಸಹ ನಮ್ಮದೇ ಆದ ಸಂಪನ್ಮೂಲಗಳನ್ನು ರೂಪಿಸಿಕೊಂಡು ನಾವು ಕೇವಲ ೬೪ ಕೋಟಿ ರೂಪಾಯಿಗಳನ್ನು ನಬಾರ್ಡ್ ಸಂಸ್ಥೆಯಿಂದ ಪಡೆದು ಹಣ ಕೊಟ್ಟಿದ್ದೇವೆ. ಹಾಗೆಯೇ ಅಧ್ಯಕ್ಷರೇ, ಇದರ ಜೊತೆಗೆ ರಿಕವರಿ ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ. ೧೯೮೨-೮೩ರಲ್ಲಿ ಅಲ್ಪಾವಧಿ ರಿಕವರಿ ೫೨.೪೭ ಪರ್ಸೆಂಟ್. ೧೯೮೩-೮೪ರಲ್ಲಿ ೪೪.೩೮ ಪರ್ಸೆಂಟ್. ೧೯೮೪-೮೫ರಲ್ಲಿ ೫೫.೬೮ ಪರ್ಸೆಂಟ್ ಆಂದಾಗ, ಓವರ್ ಡ್ಯೂಸ್‌ನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇದು ೩೬-೬-೧೯೮೫ರಲ್ಲಿ ಇದ್ದ ಹಾಗೆ. ೯೧ ೩೫ ಕೋಟಿಗಳು ಅಲ್ಪಾವಧಿ ಸಾಲದಲ್ಲಿ ಸುಸ್ತಿ ಇದೆ. ದೀರ್ಘಾವಧಿ ಸಾಲದಲ್ಲಿ ೨೫೯.೮೮ ಕೋಟಿಗಳು ಸುಸ್ತಿ ಇದೆ. ಅಂದರೆ ಈ ಒಂದು ೧೧೭.೩೩ ಕೋಟಿ ರೂಗಳು ಸುಸ್ತಿ ಇದೆ. ಸುಮಾರು ೭೦ ಕೋಟಿ ರೂಪಾಯಿ ಗಳಷ್ಟು ರೈತರಿಂದ ಬಾಕಿ ಬರಬೇಕು.

ಅಧ್ಯಕ್ಷರೇ, ನಮ್ಮಲ್ಲಿ ಬಹಳಷ್ಟು ಜನ ಇಂಡಿವಿಜ್ಯುಯಲ್ಸ್ ಕೂಡ ಡಿಪಾಸಿಟ್ಸ್ ಹೆಚ್ಚಾಗಿ ಮಾಡಿದ್ದಾರೆ. ಅವರು ನಮ್ಮಲ್ಲಿ, ಸಹಕಾರ ರಂಗದಲ್ಲಿ ವಿಶ್ವಾಸವನ್ನು ಇಟ್ಟಿದ್ದಾರೆ, ಬೇರೆ ಕಡೆಗಳಲ್ಲಿ ಅವರಿಗೆ ಹೆಚ್ಚಿಗೆ ಬಡ್ಡಿ ಬಂದರೂ ಸಹ ನಮ್ಮಲ್ಲಿ ಇಟ್ಟಿದ್ದಾರೆ. ನಾವು ಅದನು ರೈತರಿಗೆ ಕೊಡುತ್ತಾ ಇದ್ದೇವೆ. ಈ ಡಿಪಾಸಿಟ್ಸ್‌ದಾರರು ಏನು ವಿಶ್ವಾಸವನ್ನು ನಮ್ಮ ಮೇಲೆ ಇಟ್ಟಿದ್ದಾರೆ ಅದನ್ನು ಕಾಪಾಡ ಬೇಕಾದುದು ನಮ್ಮ ಅಧ್ಯಕರ್ತವ್ಯವಾಗಿದೆ. ಆದರಿಂದಾಗಿ ಹೆಚ್ಚು ಹೆಚ್ಚಾಗಿ ನಮ್ಮ ಸಂಪನ್ಮೂಲ ಗಳನ್ನು ನಾವು ವೃದ್ಧಿಸಿಕೊಂಡು ಇನ್ನು ನಾಲ್ಕೈದು ವರ್ಷಗಳೊಳಗಾಗಿ ಈ ಸಹಕಾರಿ ರಂಗಗಳ ಸಹಕಾರಿ ಬ್ಯಾಂಕ್‌ಗಳು ತಮ್ಮ ಕಾಲಮೇಲೆ ನಿಲ್ಲಬೇಕೆಂದು ಸರಕಾರದ ಉದ್ದೇಶ. ತಮಗೆ ಗೊತ್ತಿರುವ ಹಾಗೆ ೧೯೮೨-೮೩ರಲ್ಲಿ ಮಂತ್ರಿ ೧೯೪೪ರಲ್ಲಿ ಒಟ್ಟು ಬಡಿ ರಿಯಾಯಿತಿ ಕೊಟ್ಟಿದ್ದು. ಸುಮಾರು ೫೦ ಕೋಟಿ ರೂಪಾಯಿಗಳು. ಇದರ ಜೊತೆಗೆ ಸುಮಾರು ೧೫-೧೬ ಸಾವಿರ ನೀರಾವರಿ ಭಾವಿಗಳಿಗೆ ಯಾರಿಗೆ ನೀರು ಇಲ್ಲವೊ ಅವೆಲ್ಲವನ್ನೂ ನಾವು ಪಜಾ ಮಾಡಿದ್ದು. ಈಗ ಶೇಕಡಾ ೭೦ ಹಾಗೆ ಬಡ್ಡಿಯನ್ನು ಒದಗಿಸುತ್ತಾ ಇದ್ದೇವೆ. ಯಾರು ಸಕಾಲದಲ್ಲಿ ತೀರಿಸುತ್ತಾರೆ ಅಂತಹವರಿಗೆ ೭೦ ಬಡ್ಡಿದರಲ್ಲಿ ಸಾಲವನ್ನು ಒದಗಿಸುತ್ತಾ ಇದ್ದೇವೆ. ಇಷ್ಟಾದರೂ ಕೂಡಾ ದೊಡ್ಡ ರೈತರು ಯಾರಿದ್ದಾರೆ. ಸಣ್ಣ ರೈತರು ಯಾರಿದ್ದಾರೆ ಎಂದು ಗುರುತಿಸಿ, ಯಾರಿಗೆ ನಿಜವಾಗಿಯೂ ಕೊಡುವುದಕ್ಕೆ ಶಕ್ತಿ ಇಲ್ಲ, ಅವರ ಬಗ್ಗೆ ಸರಕಾರ ಒಂದು ಕರುಣೆ ತೋರಿಸುವುದಕ್ಕೆ ತಯಾರಾಗಿದೆ ಆ ವಿಷಯದಲ್ಲಿ ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಅಧಿಕಾರಿಗಳಿಗೆ ಪ್ರತಿಯೊಂದೂ ಮನೆಗೂ ಹೋಗಿ ಅವನು ಏಕೆ ಸುಸ್ತಿದಾರನು ಆಗಿದ್ದಾರೆ, ಅವನಿಗೆ ತೊಂದರೆ ಇದೆಯೇ ? ಕಂತಿ ಜಮೀನು ಇದ್ದರೆ ಕಳೆದ ನಾಲ್ಕೈದು ವರ್ಷಗಳಿಂದ ಎಷ್ಟು ಸಾರಿ ಅವನಿಗೆ ಬೆಳೆ ಬರಲಿಲ್ಲ ಎಂದು ಪ್ರತಿಯೊಂದೂ ಮನೆಗೂ ಹೋಗಿ ವಿಚಾರಿಸಿ ಅವನ ಸಹಿ ತೆಗೆದುಕೊಂಡು ಬರಬೇಕೆಂದು ಹೇಳಿದ್ದೇನೆ. ಯಾಕೆಂದರೆ ಆಫೀಸಿನಲ್ಲಿ ಕುಳಿತುಕೊಂಡು ಅವರಿಗೆ ಇಷ್ಟ ಬಂದಹಾಗೆ ಬರೆದುಕೊಳ್ಳುವುದು ಬೇಡ ಎಂದು ಹೇಳಿ ರೈತರ ಸಹಿ ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ. ಯಾರಿಗೆ ನಿಜವಾಗಿಯೂ ಕಷ್ಟ ಇದೆ. ಅಂಥವರಿಗೆ ಅದನ್ನು ೬-೮ ವರ್ಷಗಳ ಒಂದು ಸಾಲವಾಗಿ ಅದನ್ನು ಬ್ಲಾಕ್ ಮಾಡಿ, ಬ್ಲಾಕ್ ಮಾಡಿದ ಹಣಕ್ಕೂ ಕೂಡಾ ಕಡಿಮೆ ಬಡ್ಡಿ ದರದಲ್ಲಿ ನಾವು ಸಾಲ ಕೊಟ್ಟು ಪುನಃ ಚೈತನ್ಯ ಬರುವುದಕ್ಕೆ ಹೊಸ ಸಾಲವನ್ನು ಕೊಡಬೇಕೆಂದು ಮಾಡಿದ್ದೇವೆ. ಈಗಾಗಲೇ ನಾನು ಸೂಚನೆಯೆನ್ನು ಕೊಟ್ಟಿದ್ದೇನೆ. ಈ ಒಂದು ಅಂಕಿಅಂಶವನ್ನು ಡಿಸೆಂಬರ್ ಒಳಗಾಗಿ ನಮಗೆ

ಓದಗಿಸಬೇಕೆಂದು ಹೇಳಿ ಸೂಚನೆಯನ್ನು ಕೊಟ್ಟಿದ್ದೇನೆ. ಆದರೆ ನಮ್ಮ ಸರಕಾರಕ್ಕೆ ಬಂದಿರುವ ಕಷ್ಟ ಏನೆಂದರೆ ೭೦ ಕೋಟಿ ರೂಪಾಯಿಗಳನ್ನು ದೊಡ್ಡ ರೈತರೇ ನಮಗೆ ಕೊಡಬೇಕಾಗಿದೆ. ಅವರುಗಳು ತೆಂಗಿನ ತೋಟವನ್ನು ಮಾಡಿಕೊಂಡಿದ್ದಾರೆ, ದ್ರಾಕ್ಷಿ ತೋಟಗಳನ್ನು ಮಾಡಿಕೊಂಡಿದ್ದಾರೆ, ಏಲಕ್ಕಿ ತೋಟಗಳನ್ನು ಮಾಡಿಕೊಂಡಿದ್ದಾರೆ ಭಾವಿಗಳಲ್ಲಿ ಬೇಕಾದಷ್ಟು ನೀರು ಕೂಡಾ ಅವರಿಗೆ ಇದೆ. ಇಂತಹ ರೈತರುಗಳೂ ಕೂಡಾ ಉದಾಸೀನ ಮನೋಭಾವನೆಯಿಂದ, ಸರಕಾರದ ಕಾನೂನು ಕಟ್ಟಳೆಗಳಿಗೆ ಯಾವುದೇ ವಿಧವಾದ ಗೌರವವನ್ನು ಕೊಡದೇ ಅವರುಗಳು ತೆಗೆದುಕೊಂಡು ಹೋಗಿರುವ ಹಣವನ್ನು ವಾಪಸು ಕೊಡದಿದ್ದರೆ, ನಮ್ಮ ಸಹಕಾರಿ ಸಂಘಗಳನ್ನು ನಡೆಸುವುದಕ್ಕಾಗುವುದಿಲ್ಲ ಎಂದು ಈ ಕಾನೂನನ್ನು ನಾವು ತಂದಿದ್ದೇವೆ. ನಾವು ಈ ಸಭೆಯಲ್ಲಿ ಭರವಸೆ ಕೊಡುತ್ತಾ ಇರುವುದೇ ಏನೆಂದರೆ ಯಾವುದೇ ಕಾರಣದಿಂದ ಸಣ್ಣ ರೈತರಿಗೆ ಈ ಒಂದು ಕಾನೂನನ್ನು ಉಪಯೋಗಿಸುವುದಿಲ್ಲ ಎಂದು ಭರವಸೆ ಕೊಡುತ್ತೇನೆ. ಆದುದರಿಂದ ಈ ಕಾನೂನಿಗೆ ಒಪ್ಪಿಗೆ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು — ಮಾನ್ಯ ಖರ್ಗೆಯವರೇ ತಾವು ಮಾತನಾಡಿ.

†ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರು ಮಿಟ್ಕಲ್). — ಮಾನ್ಯ ಸಭಾಧ್ಯಕ್ಷರೇ, ಈ ವಂಸೂದೆಯನ್ನು ಏನು ತಂದಿದ್ದಾರೆ ಇದು ಬಹಳ ಒಳ್ಳೆಯದು. ಏಕೆಂದರೆ ನಮ್ಮ ಕಾಲದಲ್ಲಿಯೇ ನಾವು ಇದನ್ನು ಪ್ರೊಪೋಸಲ್ ಮಾಡಿದ್ದೆವು. ಡೆಪ್ಯುಟಿ ಕಮಿಶನರ್‌ರವರು ಪ್ರಸ್ತಾಪ ಮಾಡಬೇಕೆಂದು ಹೇಳಿ ಇದನ್ನು ತೀರ್ಮಾನ ಆಗಿ ತೆಗೆದುಕೊಂಡಿದ್ದೆವು. ರಿವಾಲ್ವಿಂಗ್ ಫಂಡ್ ಎಂದು ಮಾಡಿ ಕೋಆಪರೇಟಿವ್ ಸೊಸೈಟಿಯಲ್ಲಿ ಅನೇಕ ದೊಡ್ಡ ದೊಡ್ಡವರು ಏನು ಇದರ ಲಾಭವನ್ನು ಪಡೆದುಕೊಂಡಿದ್ದಾರೆ. ನಿಜವಾಗಿಯೂ ಯಾವ ಉದ್ದೇಶಕ್ಕಾಗಿ ಈ ಒಂದು ಕೋಆಪರೇಟಿವ್ ಮೂವ್‌ಮೆಂಟ್ ಇರಬೇಕೋ ಆ ಉದ್ದೇಶದ ಸಾಧನೆಯಾಗಲಿಲ್ಲ. ಯಾವ ಜನರಿಗೆ ಅದರ ಲಾಭ ದೊರಕ ಬೇಕಾಗಿತ್ತೋ ಅದು ಸ್ವಲ್ಪಮಟ್ಟಿಗೂ ಅವರಿಗೆ ತಲುಪಿಲ್ಲ ಎಂದು ಹೇಳಬಹುದು. ಇದು ಕೆಲವೇ ಜನರ ಸ್ವತ್ತಾಗಿ ಉಳಿಯಿತು, ಮತ್ತು ಇದರ ಮೂಲಕ ಕೋಟ್ಯಾಂತರ ರೂಪಾಯಿಗಳನ್ನು ಅನೇಕ ಜನ ಶ್ರೀಮಂತರು ಪಡೆದುಕೊಂಡಿದ್ದಾರೆ. ತಿಂದೂ ಹಾಕುತ್ತಿದ್ದಾರೆ. ಪಡೆದುಕೊಂಡ ಹಣವನ್ನು ತಿರುಗಿ ಕೊಡುವ ವ್ಯವಸ್ಥೆಗೆ ಅವರು ಹೋಗಲಿಲ್ಲ.

ಮಾನ್ಯ ಅಧ್ಯಕ್ಷರೇ ಕೆಲವರು ಕೋ ಆಪರೇಟಿವ್ ಸೊಸೈಟಿಗಳಲ್ಲಿ ಸಾಲ ಕೊಡಿಸಿಕೊಡುತ್ತೇವೆಂದು ಹೇಳಿ ಕರೆದುಕೊಂಡು ಹೋಗಿ ಮೋಸ ಸಹ ಮಾಡಿದ್ದಾರೆ ಕೋ ಆಪರೇಟರ್ ಸೊಸೈಟಿಗಳ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಸಹಕಾರ ಸಂಘಗಳಿಗೆ ಕರೆದುಕೊಂಡು ಹೋಗಿ ಯಾರು ಬಡವನಿರುತ್ತಾನೆ ಅವನ ಹತ್ತಿರ ತನ್ನ ಹೆಬ್ಬೆಟ್ಟು ಹಾಕಿಸಿಕೊಂಡು ನೋಡಪ್ಪ ಸಹಕಾರ ಸಂಘದಲ್ಲಿ ಸಾಲವನ್ನು ಕೊಡಲು ಅಗಲ್ಲ ನಿನಗೆ ಕಷ್ಟವಿದೆ, ಈಗ ಸಧ್ಯಕ್ಕೆ ನನ್ನ ಮನೆಯಿಂದ ನಿಂಗೆ ಸಾಲ ಕೊಡುತ್ತಿದ್ದೇನೆ. ಆದಕ್ಕಾಗಿ ನಿನ್ನ ಮನೆಯನ್ನೋ ಅಥವಾ ನಿನ್ನ ಜಮೀನಾನನ್ನು ಅಥವಾ ಬಂಗಾರವನ್ನೋ ನನ್ನ ಹತ್ತಿರ ಅಡವಿಡು. ನೀನು ದುಡ್ಡು ಕೊಟ್ಟ ಮೇಲೆ ನಿನಗೆ ಕೊಟ್ಟು ಬಿಡುತ್ತೇನೆ. ಎಂದು ಹೇಳಿ ಮೋಸ ಮಾಡುವವರು ಸಹ ಇದ್ದಾರೆ. ಪಾಪ ಆ ಬಡವ ಸಹಕಾರ ಸಂಘದಲ್ಲಿಯೂ ಸಾಲ ತೀರಿಸಬೇಕು, ಇತ್ತಕಡೆ ಇವರಿಗೂ ಸಾಲವನ್ನು ತೀರಿಸಬೇಕಾದಂಥ ಪ್ರಸಂಗಗಳು ಸಾಕಷ್ಟು ತಾವು ನೋಡಿದ್ದೀರಿ. ನಾವೂ ಸಹ ನೋಡಿದ್ದೇವೆ. ಈ ರೀತಿಯಾಗಿ ಕೆಲವು ಶ್ರೀಮಂತರು ಹಳ್ಳಿಯ ರೈತರನ್ನು ನಾಶ ಮಾಡಿದ್ದಾರೆ. ಇದರ ಲಾಭ ನಿಜವಾಗಿ ಯಾರಿಗೆ ಸಿಗಬೇಕೋ ಅವರಿಗೆ ಸಿಗುವುದಿಲ್ಲ. ಇಂತಹ ಶ್ರೀಮಂತರಿಗೆ ಯಾವ ಸರ್ಕಾರ ಬಂದರೂ ಸಹ ರಿಲೀಫ್ ಸಿಗುತ್ತದೆ. ನಮ್ಮ ಸರ್ಕಾರ ನಿಮ್ಮ ಸರ್ಕಾರ ಎನ್ನುವ ಪ್ರಶ್ನೆಯಲ್ಲ. ಅಂತಹವರಿಂದ ಯಾವ ರೀತಿಯಲ್ಲಿ ರಿಕವರಿ ಮಾಡಬೇಕು. ಯಾವ ರೀತಿಯಲ್ಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ? ಒಂದು ಮೇಳೆ ಸರ್ಕಾರ ಮನಸ್ಸು ಮಾಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೊರಟು ಕ್ರಮ ತೆಗೆದುಕೊಳ್ಳುತ್ತಾದೆ ಎಂದು ಇಟ್ಟುಕೊಳ್ಳಿ. ಆಗ ಅವರು ಏನು ಮಾಡುತ್ತಾರೆಂದರೆ ಅವರ ಜಮೀನು ಅಥವಾ ಮನೆಯನ್ನು ಆಕ್ಷನ್ ಮಾಡುವುದಕ್ಕೆ ಹೊರಟರೆ ಆ ಶ್ರೀಮಂತರು ಅವರ ಕಡೆಯವರನ್ನೇ ಒಬ್ಬ ಡಮ್ಮಿಯಾಗಿ ನಿಲ್ಲಿಸಿ ಆಕ್ಷನ್ ಮಾಡಿಸಿಕೊಳ್ಳುತ್ತಾರೆ. ಆವರ ಜಮೀನಾ ಸುಮಾರು೨೦-೨೫ಸಾವಿರ ರೂಪಾಯಿಗಳು ಬೆಲೆ ಬಾಳುವುದಾದರೆ ಅದಕ್ಕಿಂತಲೂ ಹೆಚ್ಚು ಆಕ್ಷನ್ ಮಾಡಿಸಿ ಅವರು ಕೊಡಬೇಕಾದ ಸಾಲವನ್ನು ತೀರಿಸಿ ಇನ್ನೂ ಒಂದುನಾಲ್ಕೈದು ಸಾವಿರ ರೂಪಾಯಿಗಳ ಲಾಭ ಸಂಪಾದನೆ ಮಾಡಿಕೊಳ್ಳುತ್ತಾರೆ. ಇಂತಹ ಪರಿಸ್ಥಿತಿಗಳು ಕೂಡ ಅನೇಕವುಗಳು ಇವೆ.

ಸರ್ಕಾರಕ್ಕೆ ಆ ಜನರಿಂದ ನಾನಾ ರೀತಿಯಲ್ಲಿ ಮೋಸ ಮಾಡುತ್ತಾರೆ. ಕೇಂದ್ರ ಸರ್ಕಾರದಿಂದ ಮತ್ತು ರಾಜ್ಯ ಸರ್ಕಾರಗಳಿಂದ ಸಿಗತಕ್ಕಂಥ ಎಲ್ಲಾ ರಿಯಾಯಿತಿಗಳನ್ನು ಸಹ ಇಂತಹ ಜನರಿಗೆ ಇವತ್ತು ಸಿಗುತ್ತದೆ. ನಿಜವಾಗಿ ಯಾರು ಬಡ ರೈತನು ಇರುತ್ತಾನೋ ಅವನಿಗೆ ಸಿಗುತ್ತಿಲ್ಲ. ಆ ಬಡ ರೈತರನ್ನು ರಕ್ಷಣೆ ಮಾಡುವಂತಹವರು ಯಾರೂ ಇಲ್ಲ. ಇದನ್ನು ತಿಳಿದುಕೊಂಡು ಮಾನ್ಯ ಮಂತ್ರಿಗಳು ಇಂತಹ ಕಾನೂನು ತಂದಿರುವುದು ನಿಜವಾಗಿಯೂ ಒಳ್ಳೆಯದು. ಆದರೆ ಇದರಲ್ಲಿ ದುರುಪಯೋಗವಾಗಬಾರದಂತಹ ವಿಧೇಯಕದ ೧೦೧ (೩) ಸಬ್ ಕ್ಲಾಜ್ (೨ ರಲ್ಲಿ ಏನು ಹೇಳಿದ್ದೀರಿ ಎಂದರೆ.

> "Where any property is purchased by the State Government under sub-section (1), then not withstanding anything in the Karnataka Land Revenue Act or any other law, it shall be lawful for the State Government to dispose of such property in such manner as it deems fit."
>
> ಎಂದು ಹೇಳಿದ್ದೀರಿ.

ಇದು ಪರಿವಿಗೂ ಏನಾಗಿತ್ತು ಎಂದರೆ discretion use ಮಾಡಿ ಉಪಯೋಗ ಮಾಡಿಕೊಳ್ಳಬಹುದಿತ್ತು. ಕೆಲವು ಸಿಕ್ಕಾಪಟ್ಟೆ ಲೋನ್ ತೆಗೆದುಕೊಂಡು ವಾಪಸ್ಸು ಕೊಡದೆ ಇರುವಂತಹ ಪ್ರಸಂಗಗಳು ಕೂಡ ಇವೆ. ಅದಕ್ಕೆ ನಾನು ದಯಮಾಡಿ ಹೇಳುತ್ತಿದ್ದೇನೆ.

The land should be disposed of according to the Karnataka Land Grant Rules." ಆ ಪ್ರಕಾರ ರೂಲ್ಸ್ ಇರುತ್ತದೆ. ನಿಜವಾಗಿಯೂ ತೆಗೆದುಕೊಂಡಿರತಕ್ಕಂಥ ಜಮೀನು ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಅಧಿಕಾರ ಇದೆ. ಮತ್ತೆ ಅಧಿಕಾರ ತೆಗೆದುಕೊಳ್ಳುವುದಕ್ಕೆ ಕಾನೂನು ಏತಕ್ಕೆ ಮಾಡಬೇಕು.

> "The purchase and disposal of the property under this Section shall not be questioned in any Court of Law."

ಇದನ್ನು ಕೂಡ ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಕೊಟ್ಟಿದ್ದೀರಿ. ಇವತ್ತು ಏನಾಗಿದೆ ಎಂದರೆ ಯಾವುದೇ ರೀತಿಯ ಲೋನ್ ತೆಗೆದುಕೊಳ್ಳಬೇಕಾದರೂ ಲ್ಯಾಂಡ್ ರೆವಿನ್ಯೂ ಆಕ್ಟ್ ಪ್ರಕಾರ ಡೀಲ್ ಮಾಡತಕ್ಕಂಥಾದ್ದು. ಇದೆ ತಾವು ಏನೇ ಮಾಡಬೇಕಾದರೂ ಸಹ ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಮಾಡಬೇಕು. ನಿಮಗೆ ಕೆಲವು ಅಧಿಕಾರಗಳು ಇವೆ. ಯಾವ ರೀತಿಯಲ್ಲಿ ತೆಗೆದುಕೊಳ್ಳಬೇಕೆಂಬ ಡಿಸ್ಕ್ರಿಷನ್ ಅಧಿಕಾರ ಕೂಡ ಇದೆ. ಯಾವ ರೀತಿಯಲ್ಲಿ ಅವರ ಜಮೀನು ವಶಪಡಿಸಿಕೊಳ್ಳಬೇಕು ? ಏನು ಮಾಡಬೇಕು ಎಂಬುದರ ಬಗ್ಗೆ ಕೂಡ ಅಧಿಕಾರ ಇದೆ. ಅದರ ಜೊತೆಗೆ ತಾವು ಏತಕ್ಕೆ ಇನ್ನೂ ಹೆಚ್ಚು ಅಧಿಕಾರವನ್ನು ತೆಗೆದುಕೊಳ್ಳುತ್ತಿದ್ದೀರಿ. ಒದು ವೇಳೆ ತಾವು ರಿಕವರಿ ಮಾಡುವುದಕ್ಕೆ ಹೊರಟರೂ ಸಹ ಸರ್ಕಾರಕ್ಕೆ ಮತ್ತೆ ಮೋಸ ಮಾಡುತ್ತಾರೆ. ಆದಕ್ಕಾಗಿ ನಾನು ಮಾನ್ಯ ಸಹಕಾರಿ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ತಾವು ತಂದಿರತಕ್ಕಂಥ ವಿಧೇಯಕದ ಕ್ಲಾಜ್ (೨) ಮತ್ತು (೩) ಅನ್ನು ಡಿಲೀಟ್ ಮಾಡಿ. ಮತ್ತೆ ಸೆಕ್ಷನ್ ೧೦೧(೩)ಗೆ ಯಾವುದೇ ವಿರೋಧ ಇಲ್ಲ. ನಾನು ಇವತ್ತು ಸಹಕಾರ ಸಂಘಗಳ ಬಗ್ಗೆ ಹೇಳಬೇಕಾದರೆ ಇಡೀ ಒಂದು ದಿವಸವಾದರೂ ಆಗುತ್ತದೆ. ಸಹಕಾರ ಸಂಘಗಳಲ್ಲಿ ಎಷ್ಟೋ ಜನ ಆಡ್ವಾನ್ಸ್ ತೆಗೆದುಕೊಂಡಿದ್ದಾರೆ. ಎಷ್ಟೋ ಜನ ಲಾಭ ಪಡೆದುಕೊಂಡಿದ್ದಾರೆ. ಅಂಥವರಿಗೆ ಶಿಕ್ಷೆಯಾಗಿಲ್ಲ. ಕೆಲವು ಜನ ಈ ಸಹಕಾರ ಸಂಘಗಳಿಂದ ಸಲವನ್ನು ಪಡೆದುಕೊಂಡು ಬೇರೆ ಸಹಕಾರ ಸಂಘಗಳನ್ನು ಪ್ರಾರಂಭ ಮಾಡಿರುವ ಉದಾಹರಣೆಗಳು ಸಾಕಷ್ಟು ಇವೆ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಕೆಲವು ಜನ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಇರುತ್ತಾರೆ. ಅವರು ದೊಡ್ಡ ದೊಡ್ಡ ಶ್ರೀಮಂತರು ಡಿಫಾಲ್ಟರ್ ಆದರೆ ಅವರನ್ನು ಬಿಟ್ಟು ಬಿಟ್ಟು ಸಣ್ಣ ರೈತರು ಮತ್ತು ಅತಿ ಸಣ್ಣ ರೈತರ ಮೇಲೆ ಈ ಕಾನೂನು ಉಪಯೋಗಿಸಲು ಪ್ರಯತ್ನ ಮಾಡುತ್ತಾರೆ. ಇಲ್ಲಿ ಮಾನ್ಯ ಮಂತ್ರಿಗಳು ಭರವಸೆ ಕೊಟ್ಟರೆ ಅದು ಅಲ್ಲಿ ಕಾರ್ಯಗತವಾಗುವುದಿಲ್ಲ. ಆದ್ದರಿಂದ ಇಂತಹ ಒಂದು ಕ್ಲಾಸ್ ಈ ವಿಧೇಯಕದಲ್ಲಿ ಇದ್ದರೆ ಒಳ್ಳೆಯದು, ಎಂದು ಹೇಳಿ ಇದುವರೆವಿಗೂ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ) —ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಸಹಕಾರ ಮಂತ್ರಿಗಳು ತಂದಿರತಕ್ಕಂಥ ವಿಧೇಯಕ ನಿಜವಾಗಿಯೂ ಒಪ್ಪತಕ್ಕಂಥ ವಿಧೇಯಕ. ಮಾನ್ಯ ಮಂತ್ರಿಗಳು ಮಾತನಾಡುತ್ತಾ ಸುಮಾರು ಮಂಗಾರು ವರ್ಷಗಳ ಅಂಕಿಅಂಶಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಅವರು ಕೊಟ್ಟಂತಹ ಅಂಕಿಅಂಶಗಳ ಪ್ರಕಾರ ೪೧೩ ಕೋಟಿ ರೂಪಾಯಿಗಳ ಸಾಲ ಕೊಟ್ಟಿದ್ದಾರೆ. ಆದರೆ ಅವರು ವಸೂಲು ಮಾಡಿರುವ ಸಾಲ ಸುಮಾರು ೧೫೧ ಕೋಟಿ ರೂಪಾಯಿಗಳು ಮಾತ್ರ. ಇನ್ನೂ ಸುಮಾರಾಗಿ ೨೫೦ ಕೋಟಿ ರೂಪಾಯಿಗಳನ್ನು ವಸೂಲು ಮಾಡಬೇಕಾಗಿದೆ. ಸಾಮಾನ್ಯವಾಗಿ ಮಾನ್ಯ ಸದಸ್ಯ ರಾದಂಥ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ ಹಾಗೆ ಹೆಚ್ಚಾಗಿ ಶ್ರೀಮಂತರೇ ಸಾಲವನ್ನು ತೆಗೆದುಕೊಂಡಿರುತ್ತಾರೆ. ಬಡವರಿಗೆ ಸಾಲ ಸಹಕಾರ ಸಂಘಗಳಲ್ಲಿ ಸಿಗುವುದೇ ಇಲ್ಲ. ಅದರಲ್ಲಿಯೂ ಕೂಡ ಹಿಂದುಳಿದ ವರ್ಗದವರಿಗಂತೂ ಇನ್ನೂ ಮೊದಲೇ ಸಾಲ ಸಿಗುವುದಿಲ್ಲ ಹಿಂದುಳಿದ ವರ್ಗದವರು ಆ ಸಹಕಾರ ಸಂಘದಲ್ಲಿ ಡೈರೆಕ್ಟರ್ ಸಹ ಆಗುವುದಕ್ಕೆ ಆಗುವುದಿಲ್ಲ. ಇದು ಸ್ಪಷ್ಟವಾಗಿ ತಮಗೆಲ್ಲಾ ಗೊತ್ತಿರತಕ್ಕಂಥ ವಿಚಾರ. ಸಮಾಜದಲ್ಲಿ ಒಂದು ಸಾಮಾಜಿಕ ಸಮತೋಲನವನ್ನು ಕಲ್ಪಿಸುವ ಒಂದು ವಿವೇಕಕ್ಕೆ ಮಾನ್ಯ ಮಂತ್ರಿಗಳು ಬಂದಿದ್ದಾರೆ. ಸಾಲವನ್ನು ತೆಗೆದುಕೊಂಡು ಹಾಗೆ ಯಾವ ರೀತಿಯಲ್ಲಿ ಸಾಲವನ್ನು ವಸೂಲು ಮಾಡಬೇಕೆಂಬುದರ ಬಗ್ಗೆ ತಾವು ಈ ವಿಧೇಯಕದಲ್ಲಿ ಹೇಳಿದ್ದೀರಿ. ನಾನು ಹಿಂದೆ ಕಂದಾಯ ಸಚಿವನಾಗಿದ್ದಾಗ ಈ ವಿಚಾರವನ್ನು ಯೋಚನೆ ಮಾಡಿದ್ದೆ. ಅದೇನೆಂದರೆ ಯಾರ್ಯಾರು ದೊಡ್ಡ ದೊಡ್ಡ ಶ್ರೀಮಂತ ವರ್ಗದ ಜನ ಸಾಲವನ್ನು ತೆಗೆದುಕೊಂಡಿರುತ್ತಾರೋ ಅಂತಹ ಜನರಿಂದ ಸಾಲವನ್ನು ಒಂದರ್ಧದಷ್ಟು ವಸೂಲು ಮಾಡಿ ಯಾರು ಬಡವರಿರುತ್ತಾರೋ ಅವರಿಗೆ ಹಂಚಬೇಕೆಂದು ಯೋಚನೆ ಮಾಡಿದ್ದೆವು. ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಆ ಹಣವನ್ನು ಹಂಚಬೇಕೆಂದು ಯೋಚನೆ ಮಾಡಿದ್ದೆವು. ಅಂತಹವರಿಗೆ ಮಂಜೂರು ಮಾಡಿ, ಏನೇನು ಶರತ್ತುಗಳನ್ನು ಹಾಕಬೇಕೋ ಹಾಕಿ ಸರಕಾರದವರು ನಾನ್ ಪ್ಲಾನ್ ಎಕ್ಸ್‌ಪೆಂಡೀಚರ್ ಮೇಲೆ ಹಲವಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಇದೂ ಒಂದು ನಾನ್ ಪ್ಲಾನ್ ಎಕ್ಸ್‌ಪೆಂಡೀಚರ್ ಎಂದು ತಿಳಿದುಕೊಂಡು ಬಡವರ ಉದ್ಧಾರಕ್ಕೋಸ್ಕರ ಭೂಮಿಯನ್ನು ತೆಗೆದುಕೊಳ್ಳುತ್ತೀರಿ, ತೆಗೆದುಕೊಳ್ಳಿ, ಆದರೆ ರೂಲ್ಸ್ ಮಾಡುವಾಗ ಒಂದು ಮಾಡಬೇಕು. ನಮಗೆ ಲ್ಯಾಂಡ್‌ಗ್ರಾಂಟ್ ರೂಲ್ಸ್ ಬೇರೆ ವಿವೇಚನೆ ಯಾವುದೂ ಹೊಳೆಯುವುದಿಲ್ಲ, ನಮಗೂ ಹೊಳೆಯುವುದಿಲ್ಲ, ಜನಗಳಿಗೂ ಹೊಳೆಯುವುದಿಲ್ಲ. ರೂಲ್ ಆಫ್ ಲಾ ಎಂದು ಪ್ರಜಾಪ್ರಭುತ್ವದ ಉದ್ದೇಶ ಏನಿದೆ ಅದನ್ನು ಜಾರಿಗೆ ತರಬೇಕಾದರೆ ಯಾವುದಾದರೂ ಒಂದು ಕಾನೂನು ಇರಬೇಕು ಎಂದು ನಾವು ರೂಲ್ಸ್‌ಗಳನ್ನು, ಕಾನೂನುಗಳನ್ನು ಮಾಡುವುದಕ್ಕೆ ಹೋದರೆ ದಾಕ್ಷಿಣ್ಯ ಬರುತ್ತದೆ. ಪ್ರಭಾವಗಳು ಬರುತ್ತದೆ. ಎಲ್ಲರೂ ಜಮೀನನ್ನು ಜಾಸ್ತಿ ತೆಗೆದುಕೊಳ್ಳಿವುದಕ್ಕೆ ಇಟ್ಟುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಾರೆ, ಇಷ್ಟಪಡುತ್ತಾರೆ. ಆದುದರಿಂದ ಜಮೀನನ್ನು ಸರಕಾರ, ಇವತ್ತು ಜನತಾ ಪಕ್ಷದ ಸರಕಾರ ಇರಬಹುದು, ಮುಂದೆ ಕಾಂಗ್ರೆಸ್ ಸರಕಾರ ಬರಬಹುದು, ಸರಕಾರಕ್ಕೆ ಯಾರು ಯಾರಂ ಸಹಕಾರಿಗಳು ಇದ್ದಾರೆ. ಯಾರು ಬೆಂಬಲಿಗರು ಆಗಿದ್ದಾರೆ ಅಂತಹವರಿಗೆ ಜಮೀನನ್ನು ಕೊಡುವುದಕ್ಕೆ ಅವಕಾಶವಾಗುತ್ತದೆ. ಪ್ರಭಾವಕ್ಕೆ ಒಳಗಾಗಬಾರದು. ದಾಕ್ಷಿಣ್ಯಕ್ಕೆ ಒಳಗಾಗಬಾರದು. ಯಾವ ಪಕ್ಷಕ್ಕೂ ಒಳಗಾಗದ ಹಾಗೆ ಪ್ರಜಾಪ್ರಭುತ್ವದ ಧ್ಯೇಯೋದ್ದೇಶಗಳನ್ನು ಎತ್ತಿಹಿಡಿಯಲಿಕ್ಕೆ ಏನು ಒಂದು ಸಾಧನ ಇದೆ, ಅಸ್ತ್ರ ಇದೆ. ರೂಲ್ ಆಫ್ ಲಾ, ಏನಿದೆ ಆ ರೂಲ್ ಆಫ್ ಲಾ ಬಿಟ್ಟರೆ ಅನ್ಯ ಮಾರ್ಗವೇ ಸಿಗುವುದಿಲ್ಲ. ಇದು ಮೊದಲು ವಿವೇಚನೆಗೆ ಹೋಗುತ್ತದೆ, ಆಮೇಲೆ ರೂಲ್ ಆಫ್ ಲಾ ಬರುತ್ತದೆ. ಆದುದರಿಂದ ಏನು ಕಾನೂನು ಮಾಡಿದ್ದಾರೆ ಆ ರೀತಿಯಾಗಿ ನಡೆದುಕೊಳ್ಳುವ ಪದ್ಧತಿಯನ್ನು ರೂಲ್ಸ್‌ನಲ್ಲಿ ಆಳವಡಿಸಬೇಕೆಂದು, ಇದರ ಮೂಲಕ ಜಮೀನು ಏನಂ ತೆಗೆದುಕೊಳ್ಳುತ್ತೀರಿ, ಅಧಿಕಾರ ಏನು ತೆಗೆದುಕೊಳ್ಳುತ್ತೀರಿ ಅದನ್ನು ಸರಿಯಾಗಿ ನಿರ್ವಹಣೆ ಮಾಡಬೇಕೆಂದು ಹೇಳಿ, ನಾನು ಇದಕ್ಕೆ ಹೆಚ್ಚಿನ ವಿರೋಧ ಮಾಡುವುದಕ್ಕೆ ಹೋಗುವುದಿಲ್ಲ.

†ಶ್ರೀ ಕೆ. ಹೆಚ್. ಪಾಟೀಲ್ (ಗದಗ್).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಸಹಕಾರ ಸಚಿವರಾದಂಥ ಜಾಲಪ್ಪನವರು ಈ ಒಂದು ಕಾನೂನನ್ನು ತಂದು ಒಂದು ಉತ್ತಮವಾದ ಸಂಪ್ರದಾಯವನ್ನು ಹಾಕಿದ್ದಾರೆ, ನಿಜವಾಗಿಯೂ ಕೂಡಾ ಹಣವನ್ನು ಪಡೆದುಕೊಂಡವನು ಅದನ್ನು ಪರತ್ ಕೊಡಬೇಕು. ಸಹಕಾರ ಸಂಘಗಳು ಸಾರ್ವಜನಿಕರ ಟ್ರಸ್ಟ್ ಆಗಿರುತ್ತವೆ. ಅವರೇ ಹೇಳಿದಂತೆ ಅಲ್ಲಿ ಠೇವಣಿ ಇರುತ್ತದೆ, ಸಾಲ ಇರುತ್ತದೆ, ಸರಕಾರದ ಶೇರು ಹಣ ಇರುತ್ತದೆ, ಹಣಕೊಟ್ಟವರು ನಾವು ಕೊಡುವುದಿಲ್ಲ ಎಂದು ಗಾಂಭೀರ್ಯತೆಯನ್ನು ತಳೆದರೆ ಅದು ಎಲ್ಲಾ ರೀತಿಯಿಂದಲೂ ಕಠಿಣವಾಗುತ್ತದೆ.

ಈಗ ಪರಿಸ್ಥಿತಿ ಏನಾಗಿದೆ ಎಂದರೆ, ಮೊದಲು ಸಹಕಾರ ಸಂಘದ ಕಾನೂನಿನಲ್ಲಿದ್ದಂಥ ಅನೇಕ ಕಲಮುಗಳು ಬದಲಾವಣೆಯಾಗಿದೆ. ಹೊಸ ಲ್ಯಾಂಡ್ ರಿಫಾರ್ಮ್ಸ್ ಬಿಲ್ ಬಂದ ನಂತರ ಸಹ, ಸಹಕಾರ ಸಂಘಗಳಿಗೆ ಹಣ ವಸೂಲು ಮಾಡಲಾರದಂಥ ಪರಿಸ್ಥಿತಿ ಬಂದಿದೆ. ಜಮೀನುಲಿಲಾವು ಮಾಡಿದರೆ ಯಾರು, ಅದನ್ನು ಯಾರೂ ಖರೀದಿ ಮಾಡದಿದ್ದರೆ ನಿಮ್ಮ ಹಣ ವಸೂಲಾಗುವ ಬಗೆ ಹೇಗೆ ಎಂಬ ಪ್ರಶ್ನೆ ಬರುತ್ತದೆ. ಜಮೀನನ್ನು ಸಹಕಾರ ಸಂಘಗಳು ಖರೀದಿ ಮಾಡುವುದಕ್ಕೆ ಬರುವುದಿಲ್ಲ. ಬಾಂಬೆ ಆಕ್ಟ್ ೫೯-ಎ ಇದು ಬೇರೆ ಇತ್ತು ಎಂಬುದು ತಮಗೆ ಗೊತ್ತಿದೆ. ಸಹಕಾರ ಸಂಘಗಳು ಅಗ್ರಿಕಲ್ಚರಲ್ ಇನ್‌ಸ್ಟಿಟ್ಯೂಷನ್ಸ್ ಆಗಿರುವುದರಿಂದ ಅವರು ಖರೀದಿ ಮಾಡುವುದಕ್ಕೆ ಬರುವು ದಿಲ್ಲ. ಬೇರೆ ಯಾರೂ ಬರುವುದಿಲ್ಲ. ಲಿಟಿಗೆಂಟ್ ಜನ ತಮ್ಮ ಆಸ್ತಿಯನ್ನು ಉಳಿಸಿಕೊಂಡು ಖಾಯಂ ಆಗಿ ಸಾಲ ಕೊಡಲಾರದಂಥ ಪರಿಸ್ಥಿತಿ ಸಹಕಾರ ಸಂಘಗಳಿಗೆ ಬಂದಿದೆ. ಸಹಕಾರ ಸಂಘಗಳಿಗೆ ಡಿಫಾಲ್ಟರ್ ಆಗಿ ಉಳಿಯುವುದರಿಂದ ಅಪೆಕ್ಸ್ ಬ್ಯಾಂಕ್, ಸೆಂಟ್ರಲ್ ಬ್ಯಾಂಕ್‌ನವರು ಹೊಸದಾಗಿ ಸಾಲ ಕೊಡುವುದಿಲ್ಲ. ಹೊಸದಾಗಿ ಸಾಲ ಕೊಡದಿದ್ದರೆ. ಸಣ್ಣ ಹಿಡುವಳಿದಾರರಿಗೆ ಸಾಲ ಕೊಡಬೇಕೆಂಬ ಯೋಜನೆ ಏನು ಹಾಕಿದ್ದೀರಿ, ಬಡವರಿಗೆ ಸಾಲ ಕೊಡಬೇಕೆನ್ನುತ್ತೀರಿ, ಹಿಂದುಳಿದ ವರ್ಗದವರಿಗೆ ಸಾಲ ಕೊಡಬೇಕೆನ್ನುತ್ತೀರಿ, ಅದಕ್ಕೆ ಕೊರತೆಆಗುತ್ತದೆ. ಯಾರದ್ದೇ ಹಣ ಇದ್ದರೂ ವಸೂಲಾಗಬೇಕು. ಸರಕಾರದವರು ಖರೀದಿ ಮಾಡಬೇಕೆಂದೇನೂ ಇಲ್ಲ, ಒಂದು ಪ್ರಾವಿಜನ್ ಇದೆ ಎಂದು ಹೆದರಿಕೆ ಆದರೆ, ಎಲ್ಲರೂ ಸಾಲ ಕೊಟ್ಟು ಬಿಡುತ್ತಾರೆ. ಸಾಲ ವಸೂಲಿ ಹಗುರವಾಗುತ್ತದೆ.

ಮಾನ್ಯ ಸಚಿವರು ತಂದಿರತಕ್ಕ ಕಾನೂನು ಸ್ವಾಗತಾರ್ಹವಾದುದ . ಒಂದು ಮಾತಿದೆ. ಅದನ್ನು ಮಾನ್ಯ ಸಚಿವರು ಹೆಚ್ಚು ಮುತುವರ್ಜಿ ವಹಿಸಿ ಕೇಳಬೇಕು. ಈ ಸಹಕಾರ ಸಂಘಗಳಿಂ ಮನಿ ಲೆಂಡರ್ಸ್‌ನ್ನು ವಿಾರುವುದಕ್ಕೆ ಹೊರಟಿವೆ. ರಿಸರ್ವ್ ಬ್ಯಾಂಕ್ ಕೊಡತಕ್ಕ ಕಾಲದ ರೇಟ್ ಏನಿವೆ, ಅದು ರೈತನಿಗೆ ಮುಟ್ಟುವಂತಹ ಕಾಲದಲ್ಲಿ ಚಾಸ್ತಿಯಾಗಿರುತ್ತದೆ. ವಿಳಂ ಪರ್ಸೆಂಟ್ ಇಂಟರೆಸ್ಟ್‌ಗೆ ಅವರು ಕೊಡುತ್ತಾರೆ. ಆದರೆ ಇವತ್ತು ೭ ಪರ್ಸೆಂಟ್ ಇಂಟರೆಸ್ಟ್ ಕನಸಿನಲ್ಲಿದೆಯೋ, ಕನ್ನಡಿಯಲ್ಲಿದೆಯೋ ಗೊತ್ತಿಲ್ಲ. ಇದು ರೈತಾಪಿ ಜನಕ್ಕೆ ಮುಟ್ಟುವಾಗ ಮನಿಲೆಂಡರ್ಸ್‌ಗಿಂತ ಹೆಚ್ಚಾಗಿ ಇಂಟರೆಸ್ಟ್ ಹಾಕಂತ್ತಿದ್ದಾರೆ. ಇವತ್ತು ಅಪೆಕ್ಸ್ ಬ್ಯಾಂಕ್ ಇದೆ, ಸೆಂಟ್ರಲ್ ಬ್ಯಾಂಕ್ ಇದೆ. ಸಂಘಗಳು ಇವೆ ಈ ಮೂರು ಮಾರ್ಗಗಳಿಂದ ಸಾಲ ಪಡೆಯಬೇಕಾಗುತ್ತದೆ. ಸೆಂಟ್ರಲ್ ಬ್ಯಾಂಕ್ ಅನೇಕ ಶಾಖೆಗಳನ್ನು ತೆರೆದು ವೈಭವದೊಳಗೆ ಖರ್ಚುಗಳನ್ನು ಬೆಳೆಸಿಕೊಂಡಂ ಹೆಚ್ಚು ಖರ್ಚು ಮಾಡುತ್ತವೆ. ಇದರಿಂದ ರೈತರಿಗೆ ಕೊಡುವ ಹಣ ಕೊರತೆಯಾಗುತ್ತದೆ. ಅಪೆಕ್ಸ್ ಬ್ಯಾಂಕ್ ಕೂಡಾ ಇಷ್ಟೆ ಈಗಿನ ಚೇರ್ಮನ್ ಹೇಗಿದ್ದಾರೋ ನನಗೆ ಗೊತ್ತಿಲ್ಲ. ಹಿಂದಿನ ಕಾಲದಲ್ಲಿ ಇದರ ವಿಚಾರ ಆಡಿಟ್‌ಸಲ್ಲೂ ಸಹ ಬಂದು ಅಪೆಕ್ಸ್ ಬ್ಯಾಂಕ್ ಗೆಸ್ಟ್ ಹೌಸ್‌ನಲ್ಲಿ ಲಿಕ್ಕರ್ ಬಾಟಲ್ ಸಹ ಖರ್ಚಾದುದು ಆಡಿಟ್‌ನಲ್ಲಿ ಬಂದು. ನಾನು ಹೇಳಿದೆ we are public trustees ವಿಂದು. ನಾವು ಹೀಗೆ ಹೂಡುತ್ತೇವೆ. ಇದಕ್ಕೆ ಅಧಿಕಾರಿಗಳು ಶಾಮಿಲಾಗುತ್ತಾರೆ. ಇದರಿಂದ ಹೊಲಸು ವ್ಯವಹಾರಗಳು ಆಗುತ್ತವೆ. ಜನರಲ್ಲಿ ಇವುಗಳ ಮೇಲೆ ವಿಶ್ವಾಸ ಹೋಗುತ್ತದೆ. ಇದು ಆಗದಹಾಗೆ ತಡೆಯುವುದು, ಸಹಕಾರ ಸಚಿವರು ತೆಗೆದುಕೊಳ್ಳ ಬೇಕಾದ ಮೊದಲ ಹೆಜ್ಜೆಯಾಗಿರತ್ತದೆ ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಕೇವಲ ಡಿ. ಸಿ. ಗಳಿಗೆ ಅಧಿಕಾರ ಕೊಟ್ಟರೆ ಇದು ಆಗುತ್ತದೆ ಎಂದು ನನಗೆ ಅನ್ನಿಸುವುದಿಲ್ಲ. ಇದಕ್ಕಿಂತ ಹೆಚ್ಚಾಗಿ ಸಹಕಾರ ಸಂಘಗಳಿಗೆ ಸಹ ಪವರ್ ಡೆಲಿಗೇಟ್ ಮಾಡಬೇಕು. ಮಾನ್ಯ ಸಚಿವರು ಆ ಧೈರ್ಯ ತಾಳಲಿಲ್ಲ. ಸಾಲ ವಸೂಲಿ ಆಗದಿದ್ದರೆ ಸಹಕಾರ ಸಂಘಗಳವರೂ ಸಹ ಲಿಲಾವು ಮಾಡಿ, ಆ ಲಿಲಾವಿನಲ್ಲಿ ಯೋಗ್ಯ ಜನರಿಗೆ ಜಮೀನು ಕೊಡುವಂತಹ ಯೋಜನೆ ಮಾಡಿದ್ದರೆ ಹೆಚ್ಚು ಸಮಾಜಸವಾಗುತ್ತಿತ್ತು. ಸರಕಾರದ ವಿಶ್ವಾಸ ಇವತ್ತು ಹೆಚ್ಚಾಗಿರುವುದು ಡಿ. ಸಿ. ಗಳು ಮೇಲೆ ಹೊರತು, ಇವುಗಳ ಚೇರ್ಮನ್‌ಗಳ ಮೇಲಲ್ಲ, ಆ ಕಡೆಯವರು, ಈ ಕಡೆಯವರು ಏನು ತಿಳಿದುಕೊಂಡಿದ್ದಾರೆ ಎಂದರೆ, ಸಹಕಾರ ಸಂಘಗಳು ಎಂದರೆ ಗಂಟು ಹಾಕುವುದಕ್ಕೆ ಹುಟ್ಟಿತ್ತವೆ, ಸಹಕಾರ ಚಳುವಳಿಯಲ್ಲಿ ಖದೀಮರು ಇರುತ್ತಾರೆ ಎಂದು ತಿಳಿದುಕೊಂಡಿದ್ದಾರೆ. ಇಂತಹ ದುರ್ಭಾವನೆ ಎರಡೂ ಪಕ್ಷಕ್ಕೆ ಬಂದಿದೆ. ಅಲ್ಲೊಂದಂ ಇಲ್ಲೊಂದಂ ಈ ದುಷ್ಟಕೂಟ ಸಂಪ್ರದಾಯದ ಸಹಕಾರ ಸಂಘಗಳನ್ನು ಕಂಡಿದ್ದೇವೆ. ಉತ್ತಮವಾದ ಸಹಕಾರ ಸಂಘಗಳನ್ನೂ ತಾವು ಕಂಡಿದ್ದೀರಿ. ಅಂತಹವುಗಳನ್ನು ಕೆಲವು ಸಂದರ್ಭಗಳಲ್ಲಿ ಮಾನ್ಯ ಸಚಿವರು ಎಡಪಕ್ಷದ ಅನೇಕ ಸದಸ್ಯರುಗಳಿಗೆ ತೋರಿಸಬೇಕು. ಅಂತಹ ಸಂಘಗಳನ್ನು ಮಾನ್ಯ ಸದಸ್ಯರುಗಳ ಗಮನಕ್ಕೆತರುವುದಂ ಅತ್ಯಂತ ಅವಶ್ಯ ಎಂದಂ

ನಾನು ಸಲಹೆ ಮಾಡುತ್ತೇನೆ. ರಿಸರ್ವ್ ಬ್ಯಾಂಕ್‌ನವರು ಅಲ್ಪಸಂಖ್ಯಾತರಿಗೆ, ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ, ಹರಿಜನ ಗಿರಿಜನರಿಗೆ, ಹೆಚ್ಚು ಸೌಲಭ್ಯಗಳನ್ನು ಸಾಲವನ್ನೂ ಕೊಡುತ್ತಾರೆ. ಈ ಸಾಲ ಕೊಡಬೇಕಾದರೆ ಇದರಲ್ಲಿ ಹೇರಳವಾಗಿಲಯನ್ ಶೇರ್ ತೆಗೆದುಕೊಳ್ಳುವ ಸೆಂಟ್ರಲ್ ಬ್ಯಾಂಕ್‌ಗಳು, ಅಪೆಕ್ಸ್ ಬ್ಯಾಂಕ್, ಏನಿವೆ ಇವುಗಳನ್ನು ಮಟ್ಟಿ ಹಾಕಬೇಕು. ಇವುಗಳ ಅತಿಶಯವಾದ ಖರ್ಚು ಬಂದ್ ಮಾಡಬೇಕು. ಸಹಕಾರ ಸಂಘಗಳ ಸ್ಥಿತಿ ಏಷ್ಟು ಕೆಳಮಟ್ಟಕ್ಕೆ ಹೊ ಗಿದೆ ಎಂದರೆ, ಸಹಕಾರ ಸಂಘಗಳಲ್ಲಿ ಯಾವುದಾದರೂ ಉದ್ಯಮ ಮಾಡುವಾಗ, ನಮಗೆ ಬೇಕಾಗುವ ಸಾಲಕ್ಕೆ ಐ.ಡಿ.ಬಿ.ಐ.ಗೆ ಹೋಗಬೇಕು. ತಮಗೆ ಗ್ಯಾರಂಟಿ ಕೊಡತಕ್ಕ ಸಿಂಡಿಕೇಟ್ ಬ್ಯಾಂಕ್, ಕೆನರಾಬ್ಯಾಂಕ್‌ಗೆ ಹೋಗಬೇಕು. ಅಪೆಕ್ಸ್ ಬ್ಯಾಂಕ್ ರೂಲ್ ಇದೆ. ಇದನ್ನು ಐ.ಡಿ.ಬಿ.ಐ. ನವರು ಮಂಜೂರು ಮಾಡಿದ್ದಾರೆ. ಬುದ್ಧಿ ಇಲ್ಲದವರನ್ನು ತಾವು ಆಲ್ಲಿಡುತ್ತೀರಿ. ಮಾನ್ಯ ಸಚಿವರಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ, ಬುದ್ಧಿ ಇಲ್ಲದವರನ್ನು ಅಲ್ಲಿಂದ ತೆಗೆದು. ಈ ನ್ಯಾಷನಲೈಸ್ಡ್ ಬ್ಯಾಂಕ್‌ಗಳು ಯಾವರೀತಿ ತೀವ್ರಗತಿಯಿಂದ ದಕ್ಷತೆಯಿಂದ ಕೆಲಸ ಮಾಡುತ್ತವೆ, ಅದೇ ದಕ್ಷತೆಯಿಂದ ಅಪೆಕ್ಸ್ ಬ್ಯಾಂಕ್‌ಗಳು ಕೆಲಸ ಮಾಡಲಿಕ್ಕೆ ಹೆಚ್ಚಬೇಕೆಂದು ಹೇಳುತ್ತೇನೆ.

ನಾನು ತಮಗೆ ಒಂದು ಉದಾಹರಣೆ ಹೇಳುತ್ತೇನೆ. ಒಂದು ಸಹಕಾರ ಸಂಸ್ಥೆಗೆ ಈಗ ಒಂದೂ ಒಂದೂವರೆ ವರ್ಷಗಳ ಹಿಂದೆ, ಎಲೆಕ್ಟ್ರಿಸಿಟಿ ಬಗ್ಗೆ ಗ್ಯಾರಂಟಿ ಬೇಕಾಯಿತು. ಅವರು ಅಪೆಕ್ಸ್ ಬ್ಯಾಂಕ್‌ಗೆ ಒಂದು ಲಕ್ಷ ರೂಪಾಯಿಗೆ ಗ್ಯಾರಂಟಿ ಕೊಡಿ ಎಂದು ಕೇಳಿದರು. ಅವರು ಒಂದು ಲಕ್ಷ ರೂಪಾಯಿಡಿಪಾಸಿಟ್ ಇಡಿ. ಡಿಪಾಸಿಟ್ ಇಟ್ಟರೆ ಗ್ಯಾರಂಟಿ ಕೊಡುತ್ತೇವೆ ಎಂದು ಹೇಳಿದರು. ಇಟ್ಟೆವು ಆ ಮಾತು ಬೇರೆ. ಆದರೆ ಅಪೆಕ್ಸ್ ಬ್ಯಾಂಕ್ ಸಹಕಾರ ಸಂಘಗಳ ಹತ್ತಿರ ಒಂದು ಲಕ್ಷ ರೂಪಾಯಿ ಡಿಪಾಸಿಟ್ ಇಟ್ಟುಕೊಂಡು ಒಂದು ಲಕ್ಷ ರೂಪಾಯಿ ಗ್ಯಾರಂಟಿ ಕೊಡುತ್ತಾರೆ. ಇವರಿಗೆ ವ್ಯವಹಾರ ಜ್ಞಾನ ಇರುವುದಿಲ್ಲ. ಉಳಿದವರು ಐದು ಸಾವಿರ ರೂಪಾಯಿ ಡಿಪಾಸಿಟ್ ಇಟ್ಟರೂ ಕೊಡುತ್ತಾರೆ. ಇಲ್ಲದಿದ್ದರೂ ಕೊಡುತ್ತಾರೆ. ಇವರಿಗೆ ವ್ಯವಹಾರ ಜ್ಞಾನ ಇರುವುದಿಲ್ಲ. ನೌಕರರನ್ನು ತುಂಬಿ ತುಂಬಿ ಅವರಿಗೆ ಏನಾದರೂ ಪಗಾರ ಬರುತ್ತದೆ. ಇಲ್ಲಿ ಮಿಸ್‌ಅಪ್ರೊಪ್ರಿಯೇಷನ್ ಆದರೆ ನಾನ್ ಆಫೀಷಿಯಲ್ಸ್‌ನ್ನು ಹಿಡಿಯುತ್ತೀರಿ. ಆಫೀಶಿಯಲ್ಸ್‌ನ್ನು ಹಿಡಿಯುವುದಿಲ್ಲ. ಅವ್ಯವಹಾರ ಆಗುತ್ತದೆ. ನಾನ್ ಆಫೀಷಿಯಲ್ಸ್‌ಮೇಲೆ, ಮಿನಿಸ್ಟರ್ಸ್ ಮೇಲೆ, ದೊಡ್ಡ ಅಧಿಕಾರಿಗಳ ಮೇಲೆ ಬರುತ್ತದೆ. ಕೆಲವು ಜನರಿಗೆ ವ್ಯವಹಾರ ಜ್ಞಾನ ಶೂನ್ಯವಾಗಿರುತ್ತದೆ. ಆದುದರಿಂದ ಅವ್ಯವಹಾರಗಳು ಆಗುತ್ತವೆ. ನಾನು ಮಾನ್ಯ ಚಾಲಪ್ಪನವರಿಗೆ, ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ಹೇಳುವುದೆಂದರೆ, ಇದರ ಬಗ್ಗೆ ಹೆಚ್ಚು ನಿಗಾ ವಹಿಸಬೇಕು, ರಿಸರ್ವ್ ಬ್ಯಾಂಕ್ ಹಾಗೂ ಕೇಂದ್ರ ಸರಕಾರದ ಸೌಲಭ್ಯದಿಂದ ತರುವ ಹಣ ಜನರಿಗೆ ಮುಟ್ಟುವಂತೆ ಮಾಡಬೇಕು. ಆದಷ್ಟು ಕಡಿಮೆ ಲಿಲಾವುಗಳು ಆಗುವಂತೆ ಮಾಡಬೇಕು. ಮಾನ್ಯ ಸಚಿವರು ಸಾಲ ವಸೂಲಾತಿ ಬಗ್ಗೆ ತೆಗೆದುಕೊಂಡ ಕ್ರಮವನ್ನು ನಾನು ಶ್ಲಾಘನೆ ಮಾಡುತ್ತೇನೆ.

† ಶ್ರೀ ಜೆ.ಎಸ್. ಆಚಾರ್ (ಬೈಂದೂರ್).—ಮಾನ್ಯ ಅಧ್ಯಕ್ಷರೇ, ಸಹಕಾರ ಸಂಘಗಳ ಕಾಯಿದೆ ತಂದಿರುವಂತಹ ರೀತಿನೇ ಇಸವಿ ತಿದ್ದುಪಡಿ ವಿಧೇಯಕದ ಉದ್ದೇಶ ಉತ್ತಮವಾಗಿದ್ದರೂ ಸಹ, ಕೆಲವೊಂದು ವಿಚಾರದಲ್ಲಿ ಸ್ಪಷ್ಟವಾದ ಉಲ್ಲೇಖ ಆಗಿರುವುದರಿಂದ ಕೆಲವು ತೊಂದರೆಗಳು ಬರಬಹುದು. ಇದರ ಬಗ್ಗೆ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ.

ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಷನ್ಸ್ ಅಂಡ್ ರೀಸನ್ಸ್ ಇದರಲ್ಲಿ ಡಿಫಾಲ್ಟರ್ಸ್ ಪ್ರಾಪರ್ಟಿ ಪರ್ಚೇಸ್ ಮಾಡುವಂತಹ ಅಧಿಕಾರವನ್ನು ಡಿ.ಸಿ.ಗಳಿಗೆ ಕೊಡುತ್ತಿದ್ದೀರಿ. ಮಾನ್ಯ ಸಚಿವರು ಮಾತನಾಡುವಾಗ 'ವಿಲ್‌ಫುಲ್ ಡಿಫಾಲ್ಟರ್' ಎಂದು ಹೇಳಿದರೂ ಸಹ ಇದು ವಿಧೇಯಕ ಆಗಿ ಬರುವಾಗ ಇದರಲ್ಲಿ ವಿಲ್‌ಫುಲ್ ಡಿಫಾಲ್ಟರ್ ಎನ್ನುವಂತಹ ವಿಚಾರ ಇಲ್ಲದಿರುವುದರಿಂದ ನಾಳೆ ಎಲ್ಲ ಡಿಫಾಲ್ಟರ್‌ಗಳಿಗೂ ಸಹ ಇದನ್ನು ಲಗಾವು ಮಾಡುವಂತಹ ಪ್ರಶ್ನೆ ಬರಬಹುದು. ಗ್ರಾಮೀಣ ಸಹಕಾರ ಸಂಘಗಳು ಅಥವಾ ನಮ್ಮ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳಲ್ಲಿ ಬೇರೆ ಬೇರೆ ಪ್ರಭಾವಕ್ಕೆ ಒಳಗಾಗಿ, ಸಂಘಗಳಲ್ಲಿರುವ ರಾಜಕೀಯ ಅಥವಾ ಬೇರೆ ಬೇರೆ ಪ್ರಭಾವಕ್ಕೆ ಒಳಗಾಗಿ ಜನಗಳಿಗೆ ಕಷ್ಟ ತರುವಂತಹ ಒಂದು ಪ್ರಾಬ್ಲವ್ ಬರುವಂಥಾದ್ದು ಇದೆ, ಬರಲಿಕ್ಕಿಲ್ಲ ಎಂದು ಹೇಳುವುದಕ್ಕೆ ಸಾಧ್ಯ ಇಲ್ಲ. ಇದಕ್ಕೆ ಒಂದು ವಿನಂತಿಯನ್ನು ಹಾಕಬೇಕು. ಇದರಲ್ಲಿ ವಿಲ್‌ಫುಲ್ ಡಿಫಾಲ್ಟರ್ ಎಂದು ಮಾಡುವುದು ಮಾತ್ರ ಅವಶ್ಯ.

೫–೦೦ ಪಿ.ಎಂ.

ಆದುದರಿಂದ ಅದಕ್ಕೆ ವಿಂತಿಯನ್ನು ಹಾಕಬೇಕು. ವಿಲ್‌ಫುಲ್ ಡಿಫಾಲ್ಟರ್ ಎಂದು ಮಾಡುವುದರಿಂ ಅವಶ್ಯಕ. ಇವತ್ತು ಭೂಮಿಯನ್ನೂ ಸಹ ಹರಾಜು ಮಾಡುವ ಪ್ರಶ್ನೆ ಬರಬಹುದು. ಕ್ಷಾಮ ಇತ್ಯಾದಿಗಳಿಂದ ಸಂಕಷ್ಟಕ್ಕೆ ಈಡಾದಾಗ ಒಂದು ಕಡೆಯಿಂದ ನೆರವು ನೀಡುವ ಸಂದರ್ಭದಲ್ಲಿ ಸಂಘರ್ಷಕ್ಕೆ ದಾರಿ ಮಾಡುವಂತಹ ಒಂದು ಹೊಸ ಕಲ್ಪನೆಯನ್ನು ತೋರಿಸಿದ ಹಾಗೆ ಆಗುತ್ತದೆ. ಎಲ್ಲಾ ಹಣವನ್ನೂ ಸರ್ಕಾರದಿಂದ ಪೂರೈಸುವುದಕ್ಕಾಗುತ್ತದೆಯೇ ಎನ್ನುವುದನ್ನು ಆಲೋಚನೆ ಮಾಡಬೇಕಾಗುತ್ತದೆ. ಓಟು ಕೊಡುವಂತಹ ಸಂದರ್ಭದಲ್ಲಿ ತೊಂದರೆ ಆಗಬಾರದು, ನಷ್ಟ ಆಗಬಾರದು ಎಂದು ಮಾನ್ಯ ಜಾಲಪ್ಪನವರು ಇದನ್ನು ತಂದಿದ್ದಾರೆ. ಅಲ್ಪಾವಧಿ, ಮಧ್ಯಮಾವಧಿ ಸಾಲಗಳ ಬಡ್ಡಿರಿಯಾಯಿತಿಯ ಮರು ಪಾವತಿಯ ಪ್ರಯೋಜನಗಳಿಂದ ಸಹಕಾರ ಸಂಘದಲ್ಲಿ ಅನೇಕ ಮಂದಿ ಆಕರ್ಷಿತರಾಗಿದ್ದಾರೆ. ಸಾಲ ಪಡೆಯದಿರುವವರೂ, ಹೊಸ ಸಾಲ ಪಡೆಯುವುದಕ್ಕೆ ಬರುತ್ತಾರೆ. ಬಡಪ ತನ್ನ ಭೂಮಿಯ ಮೇಲೆ ವಿಪರೀತವಾಗಿ ಸಾಲ ಪಡೆದು, ಈ ವಿಧೇಯಕದ ಮೂಲಕ ಪಾರಾಟ ಮಾಡಿಸುವ ಪ್ರಮೇಯ ಬರಂತ್ತದೆ. ಇದರ ಲಾಭ ಪಡೆಯುವ ವ್ಯವಹಾರ ಜರುಗಬಾರದೆಂದು ಮುಂಚಿತವಾಗಿ ಹೇಳಲಿಕ್ಕೆ ಬಯಸುತ್ತೇನೆ. ಆ ಭೂಮಿಯನ್ನು ಹರಾಜಿನಲ್ಲಿ ಪಡೆಯುವ ವ್ಯವಹಾರ ಬಹಳ ದೊಡ್ಡ ಮಟ್ಟದಲ್ಲಿ ಆಗುವ ಸಾಧ್ಯತೆ ಇರುವುದರಿಂದ ಯಾರಿಗೂ ನಷ್ಟ ಆಗಬಾರದು. ಮುಂದೆ ಈ ವ್ಯವಹಾರವನ್ನು ನಿಲ್ಲಿಸಬೇಕಾಗಿ ಬರಬಹುದು. ಆದ್ದರಿಂದ ಯಾರಿಗೂ ನಷ್ಟ ಆಗದ ರೀತಿಯಲ್ಲಿ ಆ ಭೂಮಿಯ ವಿತರಣೆ ಆಗಬೇಕಾದ್ದು ಅಗತ್ಯವಿದೆ ಎನ್ನುವ ವಿಚಾರವನ್ನು ಹೇಳಿ, ನಾನು ಹೇಳಿದಂತಹ ಅನುಮಾನವನ್ನು ಪರಿಹರಿಸುವಂತೆ ಈ ಕಿದ್ದುಪಡಿ, ವಿಧೇಯಕಕ್ಕೆ ಬರಬೇಕೆಂದು ಸೂಚಿಸಿ ನನ್ನ ಮಾತಗಳನ್ನು ಮುಗಿಸುತ್ತೇನೆ.

† ಶ್ರೀ ಜಿ. ಮಾದೇಗೌಡ (ಕಿರುಗಾವಲ್).—ಅಧ್ಯಕ್ಷರೇ, ನಮ್ಮ ಸಹಕಾರ ಮಂತ್ರಿಗಳು ತಂದಿರತಕ್ಕ ವಿಧೇಯಕವನ್ನು ನಾನು ಬಹಳ ಕಠಿಣವಾದ ಮಾತುಗಳಲ್ಲಿ ವಿರೋಧ ಮಾಡುತ್ತೇನೆ. ಇವತ್ತು ಈ ಸದನಕ್ಕೂ ಗೊತ್ತು, ಸರ್ಕಾರಕ್ಕೂ ಕೂಡ ಗೊತ್ತು. ಇವತ್ತು ದೇಶ ಬರಗಾಲ ಪರಿಸ್ಥಿತಿಯಲ್ಲಿ ಜನ ತಲ್ಲಣಿಸುತ್ತಿದ್ದಾರೆ ಎನ್ನುವ ವಿಷಯ ಸರ್ಕಾರ ಒಪ್ಪಿಕೊಳ್ಳಬೇಕು. ಮಾನ್ಯ ಜಾಲಪ್ಪನವರು ಹೇಳಿದರು ಮತ್ತು ಕೆಲವು ಸದಸ್ಯರೂ ಕೂಡ ಹೇಳಿದರು. ಈಗ ತಂದಿರತಕ್ಕ ವಿಧೇಯಕ ಭಾರಿ ವ್ಯವಸಾಯಗಾರರಿಗೆ, ಸರ್ಕಾರದವರು ಕೊಡತಕ್ಕಂಥ ಸಾಲವನ್ನು ಉದ್ದೇಶಪೂರ್ವಕವಾಗಿ ಬಚ್ಚಿಟ್ಟು ಕೊಂಡು ಸರ್ಕಾರಕ್ಕೆ ಮೋಸ ಮಾಡತಕ್ಕಂಥವರ ಮೇಲೆ ಪ್ರಯೋಗ ಮಾಡುವುದಕ್ಕೆ ಈ ಕಾನೂನು ತಂದಿದೆ ಎನ್ನುವ ವಿವರಣೆಯನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಮತ್ತು ಮಂತ್ರಿಗಳೂ ಕೂಡ ವಿವರಣೆಯನ್ನು ಕೊಟ್ಟಿದ್ದಾರೆ. ಮಾನ್ಯ ಜಾಲಪ್ಪನವರು ಒಳ್ಳೆಯ ವ್ಯವಸಾಯಗಾರರು ಎಂದು ತಿಳಿದುಕೊಂಡಿದ್ದೇನೆ. ರೈತರ ಕಷ್ಟ, ರೈತರ ಭಾವನೆಯನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆಂದು ನಾನು ಅಂದುಕೊಂಡಿದ್ದೆ. ಈ ವಿಧೇಯಕವನ್ನು ನೋಡಿದರೆ ಅವರ ತಿಳುವಳಿಕೆಗೆ ನಾನು ತುಂಬಾ ವಿಷಾದಪಡುತ್ತೇನೆ. ಅಧ್ಯಕ್ಷರೇ, ತಾವೂ ಕೂಡ ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕವರು. ಇವತ್ತು ಕರ್ನಾಟಕ ರಾಜ್ಯದಲ್ಲಿ ಯಾರು ಅಂಥ ದೊಡ್ಡ ಶ್ರೀಮಂತ ವ್ಯವಸಾಯಗಾರರು ಇದ್ದಾರೆ ಎನ್ನುವುದನ್ನು ಮಾನ್ಯ ಜಾಲಪ್ಪನವರು ಹೇಳಬೇಕು. ಅದರಲ್ಲಿ ಯಾರ್ಯಾರು ಸಾಲ ತೆಗೆದು ಕೊಂಡಿದ್ದಾರೆ, ಅವರ ಬಗ್ಗೆ, ಅವರ ಆಸ್ತಿಗಳನ್ನು, ಅವರ ಮನೆಗಳನ್ನು ಬಹಿರಂಗವಾಗಿ ಹರಾಜು ಮಾಡುವುದಕ್ಕೆ ನನ್ನದು ಏನೂ ತಕರಾರು ಇಲ್ಲ. ಅಧ್ಯಕ್ಷರೇ, ಇವತ್ತು ಭೂ ಸುಧಾರಣೆ ಕಾನೂನು ಪ್ರಕಾರ ತರೀ ಜಮೀನು ೧೦ ಎಕರೆ ಮೇಲ್ಪಟ್ಟು ಇಟ್ಟುಕೊಳ್ಳುವ ಹಾಗಿಲ್ಲ. ರೈತರ ಆಸ್ತಿ ಬಹಳ ಅಧೋಗತಿಗೆ ಹೋಗುತ್ತಿದೆ ಎನ್ನುವುದನ್ನು ಒಪ್ಪಬೇಕು. ಇಂತಹ ಪರಿಸ್ಥಿತಿಯಲ್ಲಿ ಇದಕ್ಕೆ ಬಹುಶಃ ಜಾಲಪ್ಪನವರೇ ಕಾರಣರು. ರೈತರು ಸಾಲ ಕೊಡುವುದಕ್ಕೆ ಅವರೇ ಜವಾಬ್ದಾರರನ್ನಾಗಿ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಸಹಕಾರ ಸಂಘಗಳು ಪ್ರಾರಂಭವಾದ ಮೇಲೆ ಸಾಲ ತೆಗೆದುಕೊಂಡಂತಹವರು ಎಷ್ಟಿದ್ದರೂ ಕೂಡ ಪುರುಪಾವತಿ ಮಾಡುವಂತಹ ಅಭ್ಯಾಸ ನಮ್ಮ ಜನಗಳಲ್ಲಿ ಇತ್ತು. ಮಾನ್ಯ ಜಾಲಪ್ಪನವರು ಮಂತ್ರಿಗಳಾದ ಮೇಲೆ ಸರ್ಕಾರದ ಸಾಲವನ್ನು ಕೊಟ್ಟರೂ ಆಯಿತು, ಕೊಡದೇ ಹೋದರೂ ಆಯಿತು ಎಂಬಂತಾಗಿದೆ. ಇಲ್ಲಿ ಪಕ್ಷ ಪಂಗಡಗಳು ಬೇಕಾಗಿಲ್ಲ ಕಾಂಗ್ರೆಸ್ ಮುಖಂಡರೂ ಇದ್ದಾಗೆ, ಜನತಾ ಮುಖಂಡರೂ ಇದ್ದಾರೆ. ಇವತ್ತು ಹೆಬ್ಬೆಟ್ಟು ಒತ್ತಿ ದೊಡ್ಡ ದೊಡ್ಡ ಸಾಹುಕಾರರು

ಗಳು ಸಾಲ ತೆಗೆದುಕೊಂಡಿದ್ದಾರೆ. ಸಾಹುಕಾರರುಗಳ ಜಮೀನುಗಳು ಹರಾಜು ಆಗದೆ, ಬಡವರಿಗೆ ಸಾಲ ಸಿಕ್ಕುತ್ತದೆಂದು ತಿಳಿದುಕೊಂಡರೆ ಅದು ಬರೀ ಭ್ರಮೆ. ಹಾಗೂ ಜಮೀನು ಹರಾಜು ಹಾಕಿದರೆ ಸಾಹುಕಾರರಿಗೆ ಹೋಗುತ್ತದೆ. ಅಧ್ಯಕ್ಷರೇ, ಏನಾದರೂ ರೈತಾಪಿ ಜನ ಎನ್ನುವುದಕ್ಕಿಂತ, ವ್ಯವಸಾಯ ಗಾರರು ದೇಶಕ್ಕೆ ಅನ್ನ ಹಾಕುವವರು ಅವರಿಗೆ ಅವಮಾನ ಮಾಡುವಂತಹ ಶಾಸನ ಇದು ಎಂದು ಕಠಿಣವಾದ ಮಾತಿನಲ್ಲಿ ಹೇಳಬೇಕಾಗಿದೆ. ಸರ್ಕಾರ ಕೊಟ್ಟಂಥ ಸಾಲವನ್ನು ವಸೂಲ್ಮಾಡಬಾರದು ಎನ್ನುವ ಪ್ರಶ್ನೆಯನ್ನು ಹಾಕಬಹುದು. ಅದಕ್ಕೆ ಅನೇಕ ದಾರಿಗಳು ಇವೆ ಸಾಮಾನ್ಯವಾಗಿ ಅವರಿಗೆ ಉತ್ತೇಜನ ಕೊಟ್ಟು, ತಿಳುವಳಿಕೆ ಕೊಟ್ಟು ಅವರ ಉತ್ಪತ್ತಿ ಜಾಸ್ತಿ ಆಗುವುದಕ್ಕೆ, ಸಂಪಾದನೆ ಜಾಸ್ತಿ ಮಾಡುವುದಕ್ಕೆ ಅವಕಾಶವನ್ನು ಕಲ್ಪನೆ ಮಾಡಬೇಕು, ಅವರಿಗೆ ಬುದ್ಧಿ ಹೇಳಬೇಕು, ನಂತರ ನೀವು ವಸೂಲ್ಮಾಡುವಂತಾದ್ದು ನಿಮ್ಮ ಆಲೋಚನೆ ಹುಟ್ಟಿದ ಕಾಲದಿಂದಲೂ ಮಾಡಿಕೊಂಡು ಬಂದಿದ್ದೀರಿ. ಯಾರು ಕೊಟ್ಟಿಲ್ಲ ಅವರ ಜಮೀನು ಹರಾಜು ಹಾಕಿ ಸರ್ಕಾರಕ್ಕೆ ಸ್ವಾಧೀನ ಮಾಡಿಕೊಳ್ಳುತ್ತಾರೆ. ಕಾನೂನುಬದ್ಧವಾಗಿ ಇದಕ್ಕೆಲ್ಲಾ ಹಚ್ಚಿಬೇಕು ಎಂದರೆ, ಇದು ನವಾಬರ ಆಡಳಿತವಾಗುತ್ತದೆ. ಯಾರು ಹಗಲಂ ರಾತ್ರಿ ದುಡಿದು ನೇಶದ ಮರ್ಯಾದೆ ಉಳಿಸಿದ್ದಾರೆ ಗೌರವ ಉಳಿಸಿದ್ದಾರೆ ಅವರು ರೈತರು. ಈ ದೇಶ ಪರಿಪೂರ್ಣವಾಗಬೇಕಾದರೆ, ರೈತನು ಆಸ್ತಿಯನ್ನು ಹರಾಜು ಹಾಕಲು ಅವಕಾಶ ಕೊಡದಂತೆ ಒಂದಾಗಬೇಕು. ಅದಕ್ಕೊಸ್ಕರ ಇದು ರೈತನಿಗೆ ಅವಮಾನ ಆಗುವ ಶಾಸನ ಎಂದು ತಿಳಿದುಕೊಂಡು ವಾಪಸ್ ತೆಗೆದುಕೊಳ್ಳಬೇಕು. ಮಾನ್ಯ ಜಾಲಪ್ಪನವರು ಅಧಿಕಾರಿಗಳನ್ನು ಕಳುಹಿಸಿ, ಮನೆ ನುಗ್ಗಿಸಿ, ಮಡಿಕೆ ಕುಡಿಕೆಗಳನ್ನು ಹೊರಗಡೆ ಹಾಕಿಸುತ್ತಾರೆಂದು ಕೇಳಿದೆ. ಮಳೆ ಬೆಳೆ ಇಲ್ಲ, ತಿನ್ನುವುದಕ್ಕೆ ಅನ್ನ ಇಲ್ಲ ಎಂದು ಒಂದು ಕಡೆ ಒಳ್ಳೆಯ ಮಾತನ್ನು ಹೇಳಿ ಇನ್ನೊಂದು ಕಡೆ ಅವರ ಆಸ್ತಿಪಾಸ್ತಿಗಳನ್ನು ಹರಾಜು ಹಾಕತಕ್ಕಂತಾದ್ದನ್ನು ತಂದಿದ್ದೀರಿ.

ಈಗ ಇದರ ಬಗ್ಗೆ ಏನು ಒಂದು ಕಾನೂನು ತಂದಿದ್ದೀರೋ ಈ ಕಾನೂನು ಒಪ್ಪತಕ್ಕಂಥ ಕಾನೂನು ಅಲ್ಲ. ದಯವಿಟ್ಟು ಇದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಇದಕ್ಕೆ ಬೇರೆ ಒಂದು ತರಹ ವಾತಾವರಣವನ್ನು ಸೃಷ್ಟಿ ಮಾಡಬೇಕು. ಒಂದು ಕಡೆ ನಿಮ್ಮ ಪಕ್ಷದವರೇ ಹೇಳುತ್ತಾರೆ ನಾವು ಚಳುವಳಿ ಮಾಡಿಸುತ್ತೇವೆ ನಿಮ್ಮ ಜಮೀನನ್ನು ಅವರು ಪೆಂಗೆ ಹರಾಜು ಹಾಕುತ್ತಾರೆ. ನೀವು ಸಾಲ ಕೊಡಬೇಡಿ ಎಂದು ರೈತರ ಮನೆ ಮನೆಗೆ ಹೋಗಿ ಪ್ರೇರೇಪಣೆ ಮಾಡುತ್ತಿದ್ದಾರೆ. ಈ ಕಾನೂನು ತಂದರೆ ರೈತರನ್ನು ಅಪಹೇಳನ ಮಾಡಿದಂಥಾ ಕಾನೂನಾಗುತ್ತದೆ. ಇದು ಸರಿಯಲ್ಲ. ಅವರಿಂದ ಸಾಲವನ್ನು ವಸೂಲ್ಮಾಡುವುದಕ್ಕೆ ಬೇರೆ ದಾರಿಗಳು ಇವೆ. ಅದು ಮಾಡಿ. ಈ ಕಾನೂನನ್ನು ವಾಪಸ್ಸು ತೆಗೆದುಕೊಳ್ಳಿ. ಮಾನ್ಯ ಮುಖ್ಯಮಂತ್ರಿಗಳು ಸಹ ಈ ಸಭೆಯಲ್ಲಿದ್ದಾರೆ. ದಯವಿಟ್ಟು ನಾನು ಹೇಳುವುದನ್ನು ಅವರು ಕೇಳಬೇಕು. ತಾವು ರೈತರ ಬಗ್ಗೆ ಹೆಚ್ಚಿನ ಕಳಕಳಿ ಇರತಕ್ಕಂಥಾವರು. ಅವರ ಬಗ್ಗೆ ಸಹಾನುಭೂತಿ ತೋರಿಸಿ. ಈ ಕಾನೂನು ತಂದರೆ ಇದು ಘೋರವಾದ ಶಾಸನವಾಗುತ್ತದೆ. ಖಾಯಂ ಶಾಸನವಾಗುತ್ತದೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಅವಕಾಶ ಕೊಡಬಾರದು ಎಂದು ಹೇಳಿ, ದಯವಿಟ್ಟು ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಈ ಶಾಸನ ರೈತರ ಜಮೀನನ್ನು ಹರಾಜು ಮಾಡತಕ್ಕಂಥಾ ಶಾಸನ. ರೈತರ ಸಾಲದ ರಿಕವರಿ ಬಗ್ಗೆ ಈ ಶಾಸನ ಜಾರಿಗೆ ತಂದರೆ ಇದಕ್ಕೆ ನಾವು ನೀವೂ ಎಲ್ಲಾ ಕಾರಣರಾಗಬೇಕಾಗುತ್ತದೆ. ಇದಕ್ಕೆ ರೈತರು ಕಾರಣರಲ್ಲ. ನೀವು ತೆಗೆದುಕೊಂಡಿರತಕ್ಕಂಥಾ ದುಡ್ಡನ್ನು ಕೊಡಬೇಡಿ, ಅದನ್ನು ವಜಾ ಮಾಡಿಸುತ್ತೇವೆ ಎಂದು ಚಳುವಳಿ ಮಾಡಿದ್ದೇವೆ ಇದು ನೆನಪು ಇರಲಿ. ರೈತರು ತಾವು ತೆಗೆದುಕೊಂಡಂಥಾ ಸಾಲವನ್ನು ಹಿಂತಿರುಗಿ ಕೊಡುವುದಕ್ಕೆ ಸದಾ ಸಿದ್ಧರಾಗಿದ್ದಾರೆ, ತಾವು ಈ ತರಹ ಕಾನೂನು ತಂದರೆ ಇದು ಖಾಯಂ ಆಗಿ ಉಳಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಇದನ್ನು ವಾಪಸ್ಸು ತೆಗೆದುಕೊಂಡು ರೈತರು ಕೊಡತಕ್ಕಂಥಾ ಸಾಲವನ್ನು ಗೌರವ ರೀತಿಯಲ್ಲಿ ವಸೂಲ್ಮಾಡುವುದಕ್ಕೆ ತಾವು ಸೂಕ್ತವಾದ ಕಾನೂನು ತನ್ನಿ ಅದಕ್ಕೆ ನಮ್ಮ ಬೆಂಬಲ ಇದೆ. ಆದರೆ ಈ ಕಾನೂನಿಗೆ ನಮ್ಮ ಬೆಂಬಲ ಇಲ್ಲ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).— ಮಾನ್ಯ ಅಧ್ಯಕ್ಷರೇ. ಈ ರಾಜ್ಯದಲ್ಲಿ ೨೦ ಎಕರೆಗಿಂತ ಕಡಿಮೆ ಇರತಕ್ಕಂಥಾ ರೈತನ ಬಾಳು ಸರ್ಕಾರೀ ಕೆಲಸದಲ್ಲಿರತಕ್ಕಂಥಾ ನೌಕರನಿಗಿಂತಲೂ ಕೀಳು ಎನ್ನುವ ಮಾತನ್ನು ಹೇಳಬೇಕಾಗಿದೆ. ಇಂತಹ ಸಮಯದಲ್ಲಿ ಈ ಒಂದು ಕಾನೂನನ್ನು ತಂದಿದ್ದೀರಿ ಈ ಕೋಆಪರೇಟೀವ್ ಮೂವ್‌ಮೆಂಟ್‌ನಲ್ಲಿ ಭ್ರಷ್ಟಾಚಾರ ಅನ್ನುವುದು ತುಂಬಿ ಹೋಗಿದೆ. ಶ್ರೀಮಾನ್

ವಂಲ್ಲಿಕಾರ್ಜುನ ಖರ್ಗೆಯವರಂ ಇದರ ಬಗ್ಗೆ ಚೆನ್ನಾಗಿ ಹೇಳಿದರು. ಒಬ್ಬ ರೈತ ಒಂದು ಸಾವಿರ ರೂಪಾಯಿ ತೆಗೆದುಕೊಳ್ಳಬೇಕಾದರೆ ೧೦೦ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ವಿತಕ್ಕೆಂದರೆ ಈ ಸಾಲವನ್ನು ರೈತರಿಗೆ ಕೊಡುವಾಗ ಅವರು ಏನು ತಿಳಿದುಕೊಳ್ಳುತ್ತಾರೆಂದರೆ ಇದು ನನಗೆ ಬಿಟ್ಟಿ ಬರುತ್ತದೆ ಮುಂದೆ ಇದು ಕೊಡಬೇಕಾಗಿಲ್ಲವೋ ಏನೋ ಅನ್ನುವ ರೀತಿಯಲ್ಲಿ ಅವರನ್ನು ಮಾಡಿದ್ದಾರೆ. ದುರಾದೃಷ್ಟವಶಾತ್ ಇಲ್ಲಿ ಇದು ಈ ಒಂದು ಸ್ಟೇಜ್‌ಗೆ ಹೋಗಿದೆ. ಇದೇ ಪಕ್ಕದ ರಾಜ್ಯವಾದ ತಮಿಳ್‌ನಾಡಿಗೆ ಹೋದರೆ, ಆಂಧ್ರಪ್ರದೇಶಕ್ಕೆ ಹೋದರೆ ಈ ಮಿಸ್‌ಅಪ್ರೊಪ್ರಿಯೇಷನ್ ಎನ್ನುವುದು ಎಕ್ಸ್‌ಪ್ಷನಲ್ ಕೇಸಸ್ ಆಗಿದೆ ಇಲ್ಲಿ ನೋಡಿದರೆ ಇದು ಸಾಮಾನ್ಯವಾಗಿ ಆಗಿಹೋಗಿದೆ. ೧೦ ವರ್ಷದ ಹಿಂದಿನಿಂದ ತೆಗೆದುಕೊಳ್ಳಿ. ಈ ಸೊಸೈಟಿಯಲ್ಲಿ ಯಾವನು ಒಂದು ಸಾವಿರ, ಎರಡು ಸಾವಿರ ಸಾಲ ತೆಗೆದುಕೊಂಡಿರುತ್ತಾನೋ ಅವರ ಮೇಲೆ ಕೇಸ್ ಹಾಕುತ್ತಾರೆ, ನಮ್ಮ ತಾಲ್ಲೂಕನ್ನೇ ತೆಗೆದುಕೊಳ್ಳಿ. ಪ್ರತಿಯೊಂದು ಕಡೆಯಲ್ಲೂ ಕೂಡ ಮಿಸ್ ಅಪ್ರೊಪ್ರಿಯೇಷನ್ ಅನ್ನುವುದು ಸಾಮಾನ್ಯವಾಗಿ ಆಗಿರುತ್ತದೆ. ಕಾರಣ ಸಮಯಕ್ಕೆ ಸರಿಯಾಗಿ ಆಡಿಟ್ ಆಗುವುದಿಲ್ಲ. ಅವರನ್ನು ಇವರು ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲ. ಅವರು ೨ ಲಕ್ಷ ೩ ಲಕ್ಷ ದುಡ್ಡನ್ನು ತಿಂದಿರುತ್ತಾರೆ, ಅಂಥವರ ಮೇಲೆ ಇವರು ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲ. ಅಲ್ಲಿರತಕ್ಕಂಥಾ ಸೆಕ್ರೆಟರಿ ಏನು ಇದ್ದಾರೆ ಅವರ ಮೇಲೆ ಸರಿಯಾಗಿ ಒಂದು ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲ. ಅವನು ಮಾರಲ್ ರೈಟ್‌ನ್ನು ಕಳೆದುಕೊಂಡಿದ್ದಾನೆ. ತಪ್ಪು ಗಮನಕ್ಕೆ ಒಂದು ವಿಷಯ ತರಬೇಕಾದರೆ ಅವರು ೨ ಸಾವಿರ ರೂಪಾಯಿ ಸಾಲಕ್ಕೆ ೪ ಸಾವಿರ ರೂಪಾಯಿಗೆ ರುಜು ತೆಗೆದುಕೊಂಡಿರುತ್ತಾರೆ. ಆಲ್ಲದೆ ಅವರು ಬ್ಲಾಂಕ್ ಪೇಪರ್‌ಗೆ ೨೦ ರುಜು ತೆಗೆದುಕೊಂಡಿರುತ್ತಾರೆ. ಮಾನ್ಯ ಜಾಲಪ್ಪನವರೇ ಇದರ ಗ್ಗೆ ಪರಿಶೀಲನೆ ನಡೆಸಿ. ಈ ರೈತರಿಗೆ ಸೊಸೈಟಿಯಿಂದ ಸಾಲ ತೆಗೆದುಕೊಳ್ಳುವಾಗ ಇವೆಲ್ಲ ಗೊತ್ತಾಗುವುದಿಲ್ಲ. ಅವನಿಗೆ ರಿಕವರಿ ಬಂದಾಗಲೇ ಗೊತ್ತಾಗುವುದು. ಆವಾಗ ಆ ರೈತರು ಯೋಚನೆ ಮಾಡುತ್ತಾನೆ. ಇದಕ್ಕೆಲ್ಲಾ ಕಾರಣ ಅಲ್ಲಿಯ ಸೆಕ್ರೆಟರಿ. ಆ ಸೆಕ್ರೆಟರಿ ಮೇಲೆ ಸರಿಯಾದ ಕಂಟ್ರೋಲ್ ಇದ್ದರೆ ರಿಕವರಿಯೂ ಸಹ ಚೆನ್ನಾಗಿ ಆಗುತ್ತದೆ. ತಮಗೆ ಒಂದು ಉದಾಹರಣೆ ಹೇಳಬೇಕಾದರೆ ನಾನು ೧೯೭೨ ಹಳ್ಳಿಗೆ ಹೋಗಿದ್ದೆ. ಆಂಧ್ರಕ್ಕೆ ಸೇರಿದ ಪಲಂನೇರ್‌ಗೆ ಹೋಗಿದ್ದೆ. ಅಲ್ಲಿ ರಿಕವರಿ ಎಷ್ಟು ಆಗಿದೆ ಅಂತ ಕೇಳಿದೆ. ಅವರು ಹೇಳಿದರು ೯೮ ಪರ್ಸೆಂಟ್ ಆಗಿದೆ ಎಂದು ಹೇಳಿದರು. ಹಾಗೆಯೇ ತಮಿಳುನಾಡಿನ ಹೊಸೂರಿಗೆ ಹೋಗಿದ್ದೆ. ಅಲ್ಲಿ ಹೇಳಿದರು ೮ ದಿವಸದಲ್ಲೇ ಪೂರ್ತಾ ಹಣ ನಮಗೆ ವಸೂಲಾಗುತ್ತದೆ ಎಂದು ಹೇಳಿದರು. ಅಲ್ಲಿಂದ ನಮ್ಮ ಕರ್ನಾಟಕಕ್ಕೆ ಬಂದೆ. ಅಲ್ಲಿ ಕೇಳಿದರೆ ಪರಿಸ್ಥಿತಿ ಹೋಡಿದರೆ ಇಲ್ಲಿ ಸೆಕ್ರೆಟರಿ ಒಳ್ಳೆಯ ಗೂಳಿ ಇದ್ದ ಹಾಗೆ ಇದ್ದಾನೆ. ಅವನನ್ನು ಗೂಳಿಯಂತೆ ಬಿಟ್ಟುಬಿಟ್ಟಿದ್ದಾರೆ. ಅವನ ಮೇಲೆ ಪ್ರೆಸಿಡೆಂಟ್ ಕಂಟ್ರೋಲ್ ಇರುವುದೆಲ್ಲ. ಹೀಗಾಗಿರುವುದರಿಂದ ನಿಮ್ಮ ಕೋಆಪರೇಟಿವ್ ಮೂವ್‌ಮೆಂಟ್‌ನಲ್ಲಿ ಭ್ರಷ್ಟಾಚಾರ ಅನ್ನುವುದು ತುಂಬಿಹೋಗಿದೆ, ಮಾರಲ್ ರೈಟನ್ನೇ ಕಳೆದುಕೊಂಡಿದ್ದಾರೆ. ಆದರಿಂದ ರಿಕವರಿ ಆಗುತ್ತಾ ಇಲ್ಲ ಇದನ್ನು ತಾವು ಸ್ಪಷ್ಟವಾಗಿ ಯೋಚನೆ ಮಾಡಬೇಕು.

ಮಾನ್ಯ ಅಧ್ಯಕ್ಷರೇ, ಇನ್ನೊಂದು ವಿಚಾರ ಏನೆಂದರೆ ತಮಗೂ ಗೊತ್ತುಂಟು. ನಾವೆಲ್ಲಾ ಹೋರಾಟ ಮಾಡಿದ್ದೇವೆ. ರೈತ ಸಂಘಗಳನ್ನು ಕಟ್ಟಿದ್ದೇವೆ. ನಮ್ಮ ಜಮೀನುಗಳನ್ನು ವಾರಾಟ ಮಾಡಕೂಡದು ಎಂದು ಶಿವಮೊಗ್ಗದಿಂದ ಸಾವಿರಾರು ಜನ ರೈತರು ನಡೆದುಕೊಂಡು ಇಲ್ಲಿಗೆ ಒಂದು ಹೋರಾಟ ಮಾಡಿದ್ದೇವೆ ಶ್ರೀಮಾನ್ ಯಾವಗಲ್‌ರವರಿಗೂ ಗೊತ್ತು, ನರಗುಂದ–ನವಲಗುಂದ ನಿಂದಲೂ ಸಹ ಸಾವಿರಾರು ಜನ ರೈತರು ಇಲ್ಲಿಗೆ ಒಂದು ದೊಡ್ಡ ಹೋರಾಟ ಮಾಡಿದ್ದಾರೆ. ಈ ಕೋಆಪರೇಟಿವ್ ಮೂವ್‌ಮೆಂಟ್‌ನಲ್ಲಿ ಹೋರಾಡುವಾಗ ಈಗಿನ ಜನತಾ ಪಕ್ಷದವರೂ ಸಹ ಒಂದು ಅಂಗವಾಗಿದ್ದರು ಆ ಟೈಮ್‌ನಲ್ಲಿ ತಾವುಗಳೆಲ್ಲಾ ಹೋರಾಟ ಮಾಡಿ ಈಗ್ಗೆ ಅವನ ಜಮೀನನ್ನು ಹರಾಜು ಹಾಕುತ್ತೇವೆಂದರೆ ಇದು ಸರಿಯೇ ಎನ್ನುವುದನ್ನು ತಾವು ದಯವಿಟ್ಟು ಯೋಚನೆ ಮಾಡಿ. ಇದರಿಂದ ಜಿಲ್ಲಾ ರೈತ ಸಂಘದವರಿಗೆ ಅವಮಾನವಾಗುತ್ತಾಗುತ್ತದೆ. ಶಿವಮೊಗ್ಗ ರೈತ ಸಂಘದವರಿಗೆಲ್ಲಾ ಅಪಮಾನ ಮಾಡಿದ ಹಾಗಾಗುತ್ತದೆ. ಈ ಕಾನೂನು ಅವರಿಗೆ ವಿರುದ್ಧವಾಗಿರುತ್ತದೆ. ಶ್ರೀಮಾನ್ ಜಿ. ಮಾದೇಗೌಡರು ಹೇಳಿದ ಹಾಗೆ ಮೊದಲಿನಿಂದಲೂ ಇದನ್ನು ಬಿಟ್ಟುಕೊಂಡು ಬಂದ ಈಗ ಅವರ ಜಮೀನನ್ನು ಹರಾಜು ಮಾಡುವ ಹಾಗೆ ಮಾಡುವುದು ಸರಿಯಲ್ಲ ಆದು ಬೇಡ ಅವರಿಗೆ ಕೂಕ್ಕ ವಾದ ಒಂದು ತಿದ್ದುಪಡಿ ತೆಗೆದುಕೊಂಡು ಬಂದು ಸಾಲವನ್ನು ವಸೂಲ್ಮಾಡುವ ಹಾಗೆ, ಮಾಡಿ, ಈ ತಿದ್ದುಪಡಿಯನ್ನು ಪಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಜಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ಈ ಕೋ-ಆಪರೇಟಿವ್ ಮೂವಮೆಂಟ್ ಬಗ್ಗೆ ಮಾನ್ಯ ಸಚಿವರು ಈಗ ಏನು ಒಂದು ಕಿದ್ದುಪಡಿಯನ್ನು ತಂದಿದ್ದಾರೆ ಇದು ರೈತರಿಗೆ ಒಂದು ಕರಾಳ ಶಾಸನ ಆದಹಾಗೆ ಆಗುತ್ತದೆ. ರೈತರಿಗೆ ಸಾಲ ಕೊಡುವ ಪದ್ಧತಿ ಏನು ಇತ್ತು, ಅದು ಮೊದಲಿನಿಂದಲೂ ಇತ್ತು. ಈವೊತ್ತಿನ ದಿನಸ ರೈತರಿಂದ ಕೋಟ್ಯಾಂತರ ರೂಪಾಯಿ ಬರಬೇಕಾಗಿದೆ. ಇದನ್ನು ವಸೂಲ್ಮಾಡುವುದಕ್ಕಾಗಿ ಸರ್ಕಾರ ಈ ಒಂದು ಕಾನೂನು ತಂದಿದೆ. ಆದರೆ ನಾನು ಈ ಸಂದರ್ಭದಲ್ಲಿ ತಮ್ಮನ್ನು ಕೇಳುವುದೇನೆಂದರೆ ಆ ರೈತರಿಂದ ಈ ಸಾಲ ವಾಪಸ್ಸು ಬರದೇ ಇರುವುದಕ್ಕೆ ಕಾರಣರು ಯಾರು? ನಾವೇ, ರಾಜಕಾರಣಿಗಳೇ! ಬೇರೆಬೇರೆ ಕಾರಣಗಳಿಂದ ಈ ದುಡ್ಡು ವಸೂಲಾಗಲಿಲ್ಲ ಚುನಾವಣಾ ಸಂದರ್ಭದಲ್ಲಿ ನಾವು ಅವರಿಗೆ ಇಲ್ಲಿಸಲ್ಲದ ಆಶ್ವಾಸನೆಗಳನ್ನು ಕೊಟ್ಟ ಕಾರಣ ರೈತರಿಂದ ಸಾಲ ವಾಪಸ್ ಬರಲಿಲ್ಲ. ಮಾನ್ಯ ಮಂತ್ರಿಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ೧೦೦ಕ್ಕೆ ೯೦ ಜನರು ಸಾಲ ಏನು ವಾಪಸ್ ಕೊಡಲಿಲ್ಲ ಅವರ ಪರಿಸ್ಥಿತಿ ಏನೂ ಅನ್ನುವುದನ್ನು ಅಧ್ಯಯನ ಮಾಡುವುದಕ್ಕೆ ತಾವು ಒಂದು ಸಮಿತಿ ಮಾಡಿ. ೧೫-೨೦ ಎಕರೆ ಇರತಕ್ಕಂಥ ವ್ಯವಸಾಯ ಮಾಡುವ ರೈತನು ಈವೊತ್ತಿನ ದಿನಸ ೨೫ ಗಂಟೆ ಕಾಲ ದುಡಿದರೂ ಕೂಡ ಅವನು ತೆಗೆದುಕೊಂಡಂಥಾ ಸಾಲವನ್ನು ತೀರಿಸುವ ಪರಿಸ್ಥಿತಿಯಲ್ಲಿಲ್ಲ. ಅವನು ತರಹಹಂದು ವಿಚಿತ್ರವಾದ ಪರಿಸ್ಥಿತಿಯಲ್ಲಿ ಜೀವನ ಮಾಡುತ್ತಿದ್ದಾನೆ. ಅವನು ತೆಗೆದುಕೊಂಡಂಥಾ ಸಾಲದ ಹಣವನ್ನು ವಾಪಸ್ಸು ಕೊಡಬೇ ಇದ್ದರೆ ಅದಕ್ಕೆ ನಾವೆಲ್ಲಾ ಜವಾಬ್ದಾರರು, ರೈತರಲ್ಲ, ಹೇಗೆಂದರೆ ನಾವು ಹಳ್ಳಿ ಹಳ್ಳಿಗಳಿಗೆ ಹೋಗಿ ಇವರ ಬಗ್ಗೆ ವಿನೇನು ಪ್ರಚಾರ ಮಾಡಿದ್ದೇವೆ ಅನ್ನುವುದನ್ನು ಗೊತ್ತೆ. ಒಂದು ಮಾತು ಹೇಳುವುದಾದರೆ ಇತ್ತೀಚೆನ ದಿವಸಗಳಲ್ಲಿ ಈ ಸರ್ಕಾರ ರೈತರಿಗೆ ಏನೇನು ಸವಲತ್ತುಗಳನ್ನು ಕೊಟ್ಟಿದ್ದಾರೆ ಅದನ್ನು ಯಾರೂ ಕೊಟ್ಟಿಲ್ಲ. ಅವರಿಗೆ ಕೊಟ್ಟಂಥ ದುಡ್ಡನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಬೇರೆ ದಾರಿ ಇದೆ. ಆ ರೀತಿ ಮಾಡಿ ಅವರು ತೆಗೆದುಕೊಂಡಂಥ ಸಾಲವನ್ನು ವಾಪಸ್ ಕೊಡುತ್ತಾರೆ. ಆದ್ದರಿಂದ ಹಣ ದೊರಕಿಸಿಕೊಡಬೇಕಾಲ್ಲರೆ ಬೇರೆ ಬೇರೆ ಮಾರ್ಗಗಳಿವೆ. ಕಷ್ಟದಲ್ಲಿ ರೈತ ಸಿಕ್ಕಿಬಿದ್ದಿರುವುದರಿಂದ ಪ್ರಾಮಾಣಿಕವಾದ ಸೌಲಭ್ಯ ಕೊಟ್ಟರೆ ಖಂಡಿತವಾಗಿ ಯಾವ ಕಾರಣಕ್ಕೂ ಸರ್ಕಾರದ ಹಣವನ್ನು ಅತ ಇಟ್ಟುಕೊಳ್ಳುವುದಿಲ್ಲ. ಆದ್ದರಿಂದ ಈ ಕರಾಳ ತಿದ್ದುಪಡಿಯನ್ನು ತಂದರೆ ರೈತರಿಗೆ ಅವಮಾನ ಮಾಡಿದಂತೆ. ಇಂಥಾದ್ದರಲ್ಲಿ ಯಾವುದೋ ಒಂದು ವಿಚಿತ್ರ ಪರಿಸ್ಥಿತಿಯನ್ನು ಆರ್ಥ ಮಾಡಿಕೊಳ್ಳದೆ ಆತನ ಆಸ್ತಿಯನ್ನು ಹರಾಜು ಮಾಡುತ್ತೇವೆಂದು ಹೇಳುವುದು ಒಪ್ಪತಕ್ಕದ್ದಲ್ಲ. ನಿಮ್ಮ ಹಿತದೃಷ್ಟಿಯಿಂದ, ಈ ರಾಜ್ಯದ ರೈತರ ಹಿತದೃಷ್ಟಿಯಿಂದ ಇದನ್ನು ಮಾಡಬೇಡಿ. ರೈತರ ಹಣ ವಸೂಲಾಗುವುದಕ್ಕೆ ಶಾಸಕರಾದ ನಾವೂ ಸಹಾಯ ಮಾಡುತ್ತೇವೆ. ದೊಡ್ಡ ದೊಡ್ಡ ರೈತರಿದ್ದಾರಲ್ಲ ಅವರಿಗೆ ಮಾಡಿ. ಸಾಮಾನ್ಯ ರೈತರಿಗೆ ಮಾಡಬೇಡಿ. ಹಿಂದೆಯೇ ನಾನು ಹೇಳಿದಂತೆ ಈ ಬಜೆಟ್‌ನಲ್ಲಿ ರೈತರ ಕಷ್ಟಗಳ ಬಗ್ಗೆ ಒಂದೂ ಮಾತು ಇರುಲ್ಲದಿವುದನ್ನು ನೋಡಿದರೆ ರೈತರ ಮೇಲೆ ಸೇಡು ತೀರಿಸಿಕೊಳ್ಳುವ ಪ್ರಯತ್ನ ಇದೇನೋ ಎಂಬಅನುಮಾನ ಬರುತ್ತದೆ. ಆದ್ದರಿಂದ ಇದನ್ನು ಜಾರಿಗೆ ಕೊಡದೆ, ಅವಮಾನಮಾಡದೆ ವಾಪಸ್ಸು ತೆಗೆದುಕೊಳ್ಳಿ ಎಂದು ತಮ್ಮಲ್ಲಿ ಡನಂತಿ ಮಾಡಿಕೊಳ್ಳುತ್ತಾ, ಈ ಕಿದ್ದುಪಡಿಯನ್ನು ರಾಜ್ಯದ ರೈತರ ಹಿತದೃಷ್ಟಿಯಿಂದ ವಾಪಸ್ ತೆಗೆದುಕೊಳ್ಳಬೇಕೆಂದು ಒಬ್ಬ ಶಾಸಕನಾಗಿ ನನ್ನ ಕ್ಷೇತ್ರದ ಜನತೆಯ ಪರವಾಗಿ ಕೇಳುತ್ತೇನೆ. ಸಾಲ ತೀರಿಸಲು ಖಂಡಿತ ರೈತ ಸಿದ್ಧನಿದ್ದಾನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಯಡಿಯೂರಪ್ಪನವರು ಬಹಳ ತೀವ್ರವಾದಂಥ ಆಕ್ಷೇಪಣೆಯನ್ನು ವ್ಯಕ್ತಮಾಡಿದ್ದಾರೆ ಅವರ ಮನಸ್ಸಿನಲ್ಲಿ ಸ್ವಲ್ಪ ಭಯವಿದ್ದಂತೆ ಕಾಣುತ್ತಿದೆ ಯಾವ ರೈತರಿಗಾಗಿ, ಅವರ ಅಭಿವೃದ್ಧಿಗಾಗಿ ಸರ್ಕಾರ ಇಷ್ಟೊಂದು ಕಲಸ ಕೈಗೊಂಡಿದೆಯೋ ಆ ರೈತರ ಬಗ್ಗೆ ಇದೇ ಸರ್ಕಾರ ಸೇಡು ತೀರಿಸಿಕೊಳ್ಳುವುದಾಗಲೀ ಅಥವಾ ಯಾವುದೇ ಅನ್ಯಾಯ ಮಾಡುವಂಥ ಅಪರಾಧ ಮಾಡುವುದಿಲ್ಲ. ನಾನು ಆಶ್ವಾಸನೆ ಕೊಡುತ್ತೇನೆ. ಆದರೆ ಈ ಕಾಯಿದೆ ಬೇಕಂ. ಇದಿಲ್ಲದಿದ್ದರೆ ಯಾರು ಬುದ್ದಿಪೂರ್ವಕವಾಗಿ ಕೊಡತಕ್ಕಂಥ ಶಕ್ತಿ ಇದ್ದರೂ ಕೂಡ ಕೊಡಲಂ ಮನಸ್ಸು ಮಾಡುವುದಿಲ್ಲವೋ ಅಂಥವರ ಮೇಲೆ ಕ್ರಮ ತೆಗದುಕೊಳ್ಳುವುದಕ್ಕಾಗುವುದಿಲ್ಲ. ಇಂಡಿಯನ್ ಪೀನಲ್ ಕೋಡ್ ಇದೆ. ಭಾರೀ ದೊಡ್ಡ ಪುಸ್ತಕ. ಆ ಕೋಡ್ ಇಲ್ಲದಿದ್ದರೆ ಶಿಕ್ಷೆ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ನಾನು ಹೇಳುತ್ತೇನೆ ಬಡ ರೈತರ ಬಗ್ಗೆ ನಮ್ಮ ಸರ್ಕಾರಕ್ಕೆ ಇರುವ ಬದ್ಧತೆ. ಸಹಾನುಭೂತಿ ಬೇರೆ ಯಾವ ಸರ್ಕಾರಕ್ಕೂ ಕಡಿಮೆ ಇಲ್ಲದಂತಹ ಪ್ರಮಾಣದಲ್ಲಿ ಇರುತ್ತದೆ. ಆದರೆ ಅವರಿಗೆ ಕೊಂದರೆ ಕೊಡುವುದಿಲ್ಲವೆಂದು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಹಾಗಿದ್ದಲ್ಲಿ ಒಂದು ತಿದ್ದುಪಡಿ ಮಾಡಿ. ೧೦ ಸಾವಿರಕ್ಕಿಂತ ಜಾಸ್ತಿ ಸಾಲ ಉಳಿಸಿಕೊಂಡಿರುವವರಿಗೆ ಮಾತ್ರ ಇದು ಅನ್ವಯವಾಗುತ್ತದೆಂದು ಹೇಳಿ. ದೊಡ್ಡ ದೊಡ್ಡವರಿಗೆ ಇದರಿಂದ ಕಷ್ಟವಾಗಲಿ. ಉಳಿದವರಿಗೆಲ್ಲಾ ಸುಲಭವಾಗಲಿ, ನೀವು ವ್ಯತ್ಯಾಸವಿಲ್ಲವೆ ಮಾಡಿ ಬಿಟ್ಟರೆ ಕಾನೂನಿಗೆ ಯೋಚನಾ ಶಕ್ತಿ ಇಲ್ಲ. ಎಲ್ಲರ ಮೇಲೂ ಗದಾ ಪ್ರಹಾರ ಮಾಡಿಬಿಡುತ್ತದೆ.

†ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಸನ್ಮಾನ್ಯ ಅಧ್ಯಕ್ಷರೇ ಈ ವಿಧೇಯಕವನ್ನು ತೀವ್ರವಾಗಿ ವಿರೋಧಿಸುತ್ತ ಒಂದೆರಡು ಮಾತುಗಳನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರಮುಖವಾಗಿ ನಾನು ಹೇಳಬೇಕಾಗಿರುವುದೇನೆಂದರೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದಹಾಗೆ ಕಾನೂನು ಬಲ ಸರ್ಕಾರಕ್ಕೆ ಕಡಿಮೆಯಾಗಿ ಹಣ ವಸೂಲಾಗಂತಿಲ್ಲ ಎಂಬ ವಿಚಾರ. ಇದು ಸರಿಯಲ್ಲ. ಮಾನ್ಯ ಸಹಕಾರ ಮಂತ್ರಿಗಳು ಹೇಳಿದರು ಹಿಂದೆ ಇದೇ ರೀತಿ ಸರ್ಕಾರಿ ಆಜ್ಞೆ ತಂದಾಗ ಅದು ಪ್ರಶ್ನಿತವಾಗಿ ಹೈಕೋರ್ಟಿನಲ್ಲಿ ತಡೆಯಾಜ್ಞೆಗೆ ಒಳಗಾಯಿತೆಂದು. ಆದರೆ ಅದು ಹಾಗೆ ಆದದ್ದಲ್ಲ. ವ್ಯಾಪಾರಿಕವಾಗಿ ಆ ಆಜ್ಞೆಯನ್ನು ಅನುಷ್ಠಾನಕ್ಕೆ ತರಲು ವಿಫಲವಾಯಿತು. ಅವರು ಹೇಳಿದಂತೆ ಜಿಲ್ಲಾಧಿಕಾರಿಗಳು ಕೊಂಡರೂ ಕೂಡ ಸ್ವಾಧೀನದಲ್ಲಿರುವ ರೈತರಿಂದ ಬಿಡಿಸಿಕೊಂಡು ಊರ್ಜಿತವಾಗಲು ಸಾಧ್ಯವಾಗುವುದಿಲ್ಲ. ಕಾರ್ಯತ; ಅಸಾಧ್ಯವಾದದ್ದರಿಂದ ವಿಫಲವಾಯಿತು. ಅದರ ಬದಲು ಕಾನೂನು ತಂದರೆ ಯಾವರೀತಿ ಬಲ ಜಾಸ್ತಿಯಾಗುತ್ತದೆ ? ರೈತ ಇವತ್ತು ಸಾಲದ ಪ್ರಶ್ನೆಯನ್ನು ಒಂದು ಮಜಲಿನಲ್ಲಿ ಯೋಚನೆ ಮಾಡುತ್ತಿದ್ದಾನೆ. ಈ ಸಾಲದ ವ್ಯವಸ್ಥೆ ಹಲವಾರು ವರ್ಷಗಳಿಂದ ನಿಂತಿರುವ ರೀತಿ ನೋಡಿದರೆ ಬಹಳ ಕಾಲದಿಂದ ಸಾಲವಾಗೇ ಇರುವ ಈ ಸಾಲಗಳು ಅವರು ತೆಗೆದುಕೊಂಡಂಥ ಸಾಲಗಳಲ್ಲ ಮಾನ್ಯ ಯಡಿಯೂರಪ್ಪನವರು ಹೇಳಿದ್ದರಲ್ಲಿ ಅರ್ಥವಿದೆ. ಬರೀ ಹೆಸರು ಮಾತ್ರ ಅವರದು. ಸಾಲ ಯಾರದೋ ಹೆಬ್ಬೆಟ್ಟು ಯಾರದೋ ಎನ್ನುವ ರೀತಿಯಲ್ಲಿ ಅನೇಕ ವರ್ಷಗಳಿಂದ ಜಟಿಲವಾದ ಕಗ್ಗಂಟಾಗಿ ಕಳತಿರುವಂಥ ಸಮಸ್ಯೆ ಇದು. ಒಂದು ದೃಷ್ಟಿಯಿಂದ ನೋಡಿದರೆ ಸಾಲದ ವ್ಯವಸ್ಥೆ ಬಹಳ ಪವಿತ್ರವಾದದ್ದು. ಯಾರು ಸಾಲವನ್ನು ತೆಗೆದುಕೊಳ್ಳುತ್ತಾರೆ ಆ ಉದ್ದೇಶಕ್ಕಾಗಿಯೇ ಬಳಸಿ ಕೊಂಡು ಉತ್ಪಾದನೆ ಮಾಡಿ ಪ್ರತಿಫಲ ರೂಪವಾಗಿ ಸಾಲವನ್ನು ಪಡೆದವರು ಸ್ವಲ್ಪ ಹೆಚ್ಚಿಗೆ ವಾಪಸ್ಸು ಕೊಡತಕ್ಕಂಥ ರೀತಿ ಇಡೀ ರಾಜ್ಯದ ಆರ್ಥ ವ್ಯವಸ್ಥೆಯ ಸ್ವಾಸ್ಥ್ಯದ ದೃಷ್ಟಿಯಿಂದ ಅತ್ಯಗತ್ಯವೆಂಬುದು ನಿಜ. ಅದೊಂದೇ ಅಲ್ಲ. ಈ ಸಹಕಾರ ಸಂಘಗಳು ಅಭಿವೃದ್ಧಿಗೊಳ್ಳಬೇಕೆಂದು ಹೇಳುವುದಷ್ಟೇ ಸರಿಯಲ್ಲ. ಮೊದಲು ರೈತ ಅಭಿವೃದ್ಧಿಗೊಳ್ಳಬೇಕು ಆಮೇಲೆ ಸಹಕಾರ ಸಂಘಗಳು ಅಭಿವೃದ್ಧಿಗೊಳ್ಳಬೇಕು.

ನನ್ನ ದೃಷ್ಟಿಯಲ್ಲಿ ರೈತರು ಸಂಘಟಿತರಾಗಿ ಚಳುವಳಿ ಮಾಡಿ ಅನೇಕ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟಿದ್ದಾರೆ. ಅವರ ಬೇಡಿಕೆಗಳಲ್ಲಿ ಅತ್ಯಂತ ಪ್ರಬಲವಾದದ್ದೆಂದರೆ ಅವರಿಂದ ಬಾಕಿ ಉಳಿದಿರ ತಕ್ಕಂಥ ಸಾಲವನ್ನು ಪುನರ್ ವಿಮರ್ಶೆ ಮಾಡಬೇಕೆಂಬುದು ಮತ್ತು ಇದರಲ್ಲಿ ಅನೇಕ ನ್ಯಾಯವಲ್ಲದ ಕ್ರಮಗಳಿಂದಾಗಿ ಉದ್ಭವಿಸಿದ ಅನೇಕ ಸಮಸ್ಯೆಗಳನ್ನು ಬಗೆಹರಿಸಬೇಕೆಂಬ ವಿಚಾರ ಕೂಡ ಇದೆ. ಸರ್ಕಾರವೇನೋ ತಾನು ಬಹಳ ಸಹಾನು ಭೂತಿಯಿಂದ ರೈತರಿಗೆ ವ್ಯವಸ್ಥೆ ಮಾಡುತ್ತೇವೆಂದು ಹೇಳುತ್ತಿದೆ. ಈ ಬಗ್ಗೆ ವಾದ ವಿವಾದಕ್ಕೆ ನಾನು ಇಳಿಯುವುದಿಲ್ಲ. ಅದು ಅವರ ಕರ್ತವ್ಯ. ರೈತರ ಸಮಸ್ಯೆಗಳನ್ನು ಬರೀ ತೇಪೆ ಹಾಕುವುದರಿಂದ ಪರಿಹರಿಸುವುದಕ್ಕೆ ಸಾಧ್ಯವಿಲ್ಲ. ರಿಯಾಯ್ತಿ ಕೊಟ್ಟರೆ ಸಾಲದು. ಅದನ್ನು ಸಮಗ್ರವಾಗಿ ನೋಡತಕ್ಕಂಥ ಒಂದು ಹೊಸ ವ್ಯವಸ್ಥೆಯನ್ನು ಆಂದರೆ ರೈತರೇ ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವಂಥ ಒಂದು ಮಜಲಿನಲ್ಲಿ ನಾವು ಮಂತ್ನಡೆಯಬೇಕಾಗಿದೆ. ನಾನು ತಿಳಿದಮಟ್ಟಿಗೆ ಸರ್ಕಾರ ಒಂದು ಸಮಿತಿಯನ್ನು ರಚನೆ ಮಾಡಿತು. ಅಗ್ರಿಕಲ್ಚರಲ್ ಪ್ರೈಸಸ್ ಬಗ್ಗೆ ಮೊದಲು ಮಾಡಿದರು, ಅನಂತರ ಶ್ರೀ ಬೊಮ್ಮಾಯಿಯವರ ನೇತೃತ್ವದಲ್ಲಿ ಒಂದು ತನಿಖಾ ಸಮಿತಿ ರಚಿಸಿ ಆದಕ್ಕೆ ವ್ಯಾಪಕವಾದ ಅಧಿಕಾರವನ್ನೂ ಅಧ್ಯಯನವಾಗಬೇಕಾದ ವಿಷಯಗಳನ್ನೂ ಕೊಟ್ಟರು. ಬರಗಾಲ, ನೀರಾವರಿ ಸೌಕರ್ಯ ಮುಂತಾದ ಅಂಶಗಳನ್ನು ಒಳಗೊಂಡಿದ್ದ ಆ ಕಮಿಟಿಯ ವ್ಯಾಪ್ತಿಗೆ ರೈತರ ಸಾಲ ಮರುಪಾವತಿ ವಿಚಾರ ಇದರಲ್ಲಿ ಬರುವುದಿಲ್ಲವೋ ? ಸಹಾನುಭೂತಿ ಇದೆ ಎಂದು ಹೇಳಿದ ಮಾತ್ರಕ್ಕೆ ಪರಿಹಾರ ಒದಗಿಸಿಕೊಟ್ಟಂತಾಗುವುದಿಲ್ಲವಲ್ಲ.

ಕೂಡಲೇ ನೀವು ರೈತರ ಜತೆ ಸಂವಾದ ಮಾಡಿ ಅವರ ಕಷ್ಟಕಾರ್ಪಣ್ಯಗಳನ್ನು ಕೇಳಿ ನಿಮ್ಮ ಶಕ್ತಿಗನುಸಾರ ಪರಿಹಾರ ಕೊಡಿ. ಸಮಿತಿಯ ಶಿಫಾರಸ್ಸುಗಳನ್ನು ಒಮ್ಮೆ ನೋಡಿ. ಯಾವುದೇ ಸಮಸ್ಯೆ ಬಂದರೂ ಅದನ್ನು ಪರಿಹರಿಸುವುದಕ್ಕಾಗಿ ಈ ಸರ್ಕಾರ ಒಂದು ಕಮಿಟಿ ಮಾಡಿಬಿಡುವುದು ಎಂಬ

ಭಾವನೆ ಬರುವಂತಿದೆ. The best solution for solving any problem is either to dodge it or referring it to a Committee. ಕಮಿಟಿ ಮಾಡಿಬಿಟ್ಟರೆ ಮುಂಗಿಯಿ ತೆಂದು ಭಾವಿಸುವುದು ಸರಿಯೇ ? ಏಕೆಂದರೆ ಈಗ ಬಗೆಹರಿಸತಕ್ಕ ಸಮಸ್ಯೆಗಳ ಪೈಕಿ ಸಾಲ ಮರು ಪಾವತಿ ಕೂಡ ಒಂದು ಡೆಪ್ಯುಟಿ ಕಮೀಷನರ್ ಅವರಿಂದ ಆಸ್ತಿಯನ್ನು ಬಿಡ್ ಮಾಡಿಸಲಾಗುವುದೆಂದು ಹೇಳಿದ್ದಾರೆ. ಹಾಗಾದರೆ ಇದುವರೆಗೂ ಡಿ. ಸಿ.ಯವರ ಬಳಿ ಇದ್ದ ಯಥೇಚ್ಛ ಅಧಿಕಾರದಿಂದ ಅವರೇನೇನು ಮಾಡಿದ್ದಾರೆ ?

ಶ್ರೀ–ಸಿ ಪಿ. ಎಂ.

ಅದಲ್ಲ ಪ್ರಶ್ನೆ. ಯಾವ ಹಿನ್ನೆಲೆಯಲ್ಲಿ ಬಂದಿದೆ ಎನ್ನುವುದು ಪ್ರಶ್ನೆ. ಮುಖ್ಯವಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ನನ್ನ ಗಮನಕ್ಕೆ ಬಂದಿರತಕ್ಕ ಅನುಭವವನ್ನು ಹೇಳುತ್ತೇನೆ. ರೈತ ಸಂಘದವರು ಅಥವಾ ಅವರ ಪ್ರತಿನಿಧಿಗಳು ಹೇಳಿದ್ದೆಲ್ಲಾ ಸಮರ್ಪಕವಾಗಿದೆ ಎಂದು ನಾನು ವಕಾಲತ್ತು ಮಾಡುತ್ತಾ ಇಲ್ಲ. ಕೆಲವೊಂದು ತೀವ್ರವಾದ ರೀತಿಯಲ್ಲಿ ವಿಚಾರಗಳನ್ನು ಇಟ್ಟಿರಬಹುದು. ಆದರೆ ಅವರೂ ಕೂಡ ಸರ್ಕಾರದವರ ಜೊತೆಯಲ್ಲಿ ಮಾತನಾಡಲು ಕೆಲವೊಂದು ನೆಲೆಯನ್ನು ಇಟ್ಟುಕೊಂಡಿದ್ದಾರೆ. ಸರ್ಕಾರ ಎಷ್ಟು ಹೆಜ್ಜೆ ಮುಂದಕ್ಕೆ ಹೋಗಬಹುದು ಎನ್ನುವುದು ಸರ್ಕಾರಕ್ಕೆ ಬಿಟ್ಟಿರತಕ್ಕ ವಿಚಾರ. ಕೆಲವೊಂದು ಹಳ್ಳಿಗಳಲ್ಲಿ ಬಾಕಿಗೋಸ್ಕರ ಆಸ್ತಿ ಹರಾಜಿಗೆ ಬಂದಾಗ ಹತ್ತಾರು ಹಳ್ಳಿಗಳ ರೈತರೂ ಸೇರಿ ಯಾರೂ ಬಿಡ್ ಮಾಡಬಾರದು ಎಂದು ದಿಗ್ಬಂಧನ ಹಾಕಿದರು. ಅದಕ್ಕೆ ನೀವು ಇದನ್ನು ಮಾಡಿದರೆ ಆಗುವುದಿಲ್ಲ. ಇದನ್ನು ಮಾಡಿದರೆ ಶುದ್ಧ ಅವಿವೇಕವಾಗುವುದಿಲ್ಲವೆ ? ಮಂತ್ರ ಮಾಯ ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಪ್ರತಿಕ್ರಿಯಾತ್ಮಕವಾಗಿ ಇದನ್ನು ತಂದರೆ, ಸಾಧಾರಣವಾಗಿ ಯಾವುದೋ ವಿಶೇಷವಾದ ಸಂದರ್ಭದಲ್ಲಿ ಬಳಕೆಯಾಗುತ್ತದೆ ಎನ್ನುವುದು ಉಳಿದಿಲ್ಲ. ರೈತರೆಲ್ಲ ಸೇರಿಬಿಟ್ಟು ಯಾರಿಗೂ ಬಿಡ್ ಮಾಡುವುದಕ್ಕೆ ಬಿಡುವುದಿಲ್ಲ, ಸರ್ಕಾರವೇ ಕೊಂಡುಕೊಳ್ಳಬೇಕು. ಸರ್ಕಾರಕ್ಕೆ ಒಂದು ಬಿಲ್ಲೆ ಪ್ರಯೋಜನವಾಗುವುದಿಲ್ಲ. ಸೇಡಿಗಾಗಿ ತೆಗೆದುಕೊಳ್ಳಬೇಕು ಎನ್ನುವ ಉದ್ದೇಶ ಇಲ್ಲದೇ ಇರಬಹುದು. ಮುಖ್ಯಮಂತ್ರಿಗಳಂ ಸೇಡಿನ ಮನೋಭಾವ ಇಲ್ಲ ಎಂದು ಹೇಳಿದರೆ ಇದೆ ಎಂದು ನಾವು ವಾದ ಮಾಡುವುದಕ್ಕೆ ಹೋಗುವುದಿಲ್ಲ. ಕೊನೆಯಲ್ಲಿ ಸೇಡಿನಲ್ಲಿ ಪರ್ಯವಸಾನವಾಗುತ್ತದೆ. ಸರ್ಕಾರಕ್ಕೆ ಯಾವುದೇ ಲಾಭ ಇಲ್ಲ. ಡೆಪ್ಯುಟಿ ಕಮಿಷನರ್ ಬಿಡ್ ಮಾಡುತ್ತಾನೆ, ಡೆಪ್ಯುಟಿ ಕಮಿಷನರ್ ಸಾಗುವಳಿ ಮಾಡುತ್ತಾರೆಯೇ, ರವಿನ್ಯೂ ಇನ್ಸ್‌ಪೆಕ್ಟರ್ ಸಾಗುವಳಿ ಮಾಡುತ್ತಾರೆಯೇ, ಅನುಭವ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ, ಅದನ್ನು ಮತ್ತೊಬ್ಬರಿಗೆ ಮಾರಾಟ ಮಾಡಿದರೆ ಲಾಭ ಆಗುವುದಿಲ್ಲ ಸರ್ಕಾರದ ಅಕೌಂಟ್ಸ್‌ಗೆ ಇಷ್ಟು ಲಕ್ಷ ರೂಪಾಯಿ ಆಸ್ತಿ ಬಂದಿದೆ ಎಂದು ಬರೆದುಕೊಳ್ಳಬಹುದು. ಈ ಒಂದು ವಾತಾವರಣ ಫ್ಯಾಕ್ಟರಿಗಳಲ್ಲಿರುವುದಿಲ್ಲ. ರೈತರ ಸಮಸ್ಯೆ ಬಂದಾಗ ಪರಿಶೀಲಿಸಬೇಕಾಗಿದೆ ಎಂದು ಹೇಳುತ್ತೀರಿ. ಆದರೆ ಕೈಗಾರಿಕೆಗಳಲ್ಲಿ ಈ ಪರಿಸ್ಥಿತಿ ಇಲ್ಲ, ಅದಕ್ಕೆ ಮಾರ್ಕೆಟ್ ಇದೆ. ಇವತ್ತು ರೈತನಿಗೆ ಆ ಒಂದು ವ್ಯವಸ್ಥೆ ಇಲ್ಲ ರೈತನು ಬೆಳೆದಿರತಕ್ಕ ಮಾಲಿಗೆ ಬೆಲೆ ಇಲ್ಲ, ಅವನು ಕೊಳ್ಳಬೇಕಾದಂಥ ಮಾಲಿಗೆ ಹೇಳಿದಷ್ಟು ಬೆಲೆ ತೆರಬೇಕಾಗಿದೆ, ಬೆಳೆದಿದ್ದನ್ನು ಇಟ್ಟುಕೊಳ್ಳುವುದಕ್ಕೆ ಗೋಡೌನ್ ಇಲ್ಲ, ಬೆಳೆ ಬರುತ್ತದೆ ಎಂದು ಕಾಯುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ನಾನು ಮಂತ್ರೊಬ್ಬರು ತಪ್ಪಿತಸ್ಥರು ಎಂದು ಹೇಳುವುದಕ್ಕೆ ತಯಾರಿಲ್ಲ ಇದೇ ಸರ್ಕಾರದ ಮೇಲೆ ತಪ್ಪನ್ನು ಕೂರಿಸುವುದಕ್ಕೆ ತಯಾರಿಲ್ಲ. ಪ್ರಗತಿ ಹೊಂದುವಾಗ ಹಲವಾರು ವಿಷ ವೃತ್ತಗಳು ಅದನ್ನು ಹಿಡಿದುಕೊಂಡಿವೆ. ಅದನ್ನು ಸಮಗ್ರವಾಗಿ ಪರಿಶೀಲನೆ ಮಾಡುವುದಕ್ಕೆ ಏನಾ ಸಮಿತಿ ಮಾಡಿದ್ದೀರಿ ಅದನ್ನು ಸ್ವಾಗತಿಸುತ್ತೇನೆ. ಸಮಿತಿ ಎಷ್ಟರಮಟ್ಟಿಗೆ ಕೆಲಸ ನಿರ್ವಹಿಸುತ್ತೋ ಗೊತ್ತಿಲ್ಲ, ಪಾಸ್ಕ ಪ್ರಕಾಶ್‌ರವರು ಅದರಲ್ಲಿದ್ದಾರೆ. ಈ ಎಲ್ಲಾ ಕೆಲಸವನ್ನು ನಿರ್ವಹಿಸಿದರೆ ಈ ಸಮಸ್ಯೆ ಬಗೆಹರಿಸಬಹುದು. ಈಗಾಗಲೇ ಡೆಪ್ಯುಟಿ ಕಮಿಷನರಿಗೆ ಸಾಕಷ್ಟು ಕೆಲಸ ಇದೆ, ಅವರ ಕೆಲಸ ಅವರು ಮಾಡಿಕೊಂಡು ಹೋದರೆ ಸಾಕು. ಅದರ ಜೊತೆಗೆ ಈ ಕಾನೂನನ್ನು ಅವರಿಗೆ ಕೊಟ್ಟರೆ ಯಾವ ಸಾಧನೆಯೂ ಆಗುವುದಿಲ್ಲ. ಖಂಡಿತ ವಾತಾವರಣ ಹದಗೆಡುತ್ತದೆ. ಇದು ಅವಿವೇಕದ ಕಾನೂನಾಗುತ್ತದೆ. ಒಳ್ಳೆಯ ಉದ್ದೇಶ ಇಟ್ಟುಕೊಂಡರೂ ಕೂಡ ಪರಿಣಾಮದಲ್ಲಿ ಏನಾಗುತ್ತದೆ, ನೀವು ನಿರೀಕ್ಷಿಸಿದುದಕ್ಕಿಂತ ತದ್ವಿರುದ್ಧವಾದ ಪರಿಣಾಮವಾಗುತ್ತದೆ. ಆದುದರಿಂದ ಇದನ್ನು ವಾಪಸ್ ಪಡೆಯಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† SRI MOHAMMAD LAIQUDDIN (BIDAR)–Mr. Speaker Sir, in the proposed amendment, only the interest and convenience of the Co-operation Department has been taken into consideration while the interest of farmers and their hardships have been totally ignored. You have given discretion to the Deputy Commissioner It is no guarantee that discretion will be properly excercised by the Deputy Commissioner, The over-riding effect regarding the sale or purchase of the property by the Deputy Commissioner. Commissioner is not at all defined properly While purchasing theproperty there is no mention that the property will be purchased at the market price It is no guarantee that the Deputy Commissioner will be purchasing it at the market value. It is the general practice of the Government officials to purchase of property at the rate whatever dues payable to the Government by the concerned farmer. In other words, they will not be purchasing the property at the prevailling market price. It is a drawback in this amendment. Therefore, this power cannot be given to the Deputy Commissioner. Secondly, the amendment says that the sale or purchase cannot be challenged in any court of law. This proposed amendment is not constitutional according to me sir, because many of the moveable and immoveable properties belonging to farmers are having their constitutional rights to safeguard their interest. They can go to the court of law. That right is taken away by this amendment and as a result of which farmers are thrown to begging. So, the amendment, purchase of ale of property shall not be questioned in any court of law is not justifiable, Moreover it is our experience that the loans are issued to persons who are actually in possession of the property. Merely inserting their names in the column of cultivation they obtain loan. If they turn to be defaulters then the entire property will be put to auction because many properties' disputas are lying in the land tribunals under the Land Reforms Act. Even occupancy rights cannot be given for 8 to 10 years under the Land Reforms Act. There is a bar for the disposal of the property. In the amendment you have said as follows ;

> " Any property purchased by the State Government under Sub-Section (1) notwithstanding anything in the Karnataka Land Reforms Act, or any other law it shall be lawful for the State Government to dispose of the property in such a manner as it deems fit ".

Even if ther is a bar under the Karnataka Land Reforms Act, the Government is at liberty to dispose of the property by selling it to other persons. This is not at all a proper provision where the farmert property can be sold without taking into consideration the

other laws. In case of joint family in pahani patras or land records they usually write father's name as owner and son's name as actual cultivator or vice-versa In such cases, there is no guarantee that auction will take place, and the D.C. will excercise his discretion properly Therefore, I must humbly request the Minister and the Chief Minister to withdraw this amendment in the interest of farmers.

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೆ, ಮಾದ ಬಹಳ ಚೆನ್ನಾಗಿ, ಬಹಳ ಕಟುವಾಗಿ ಮಾಡಿದ್ದಾರೆ. * * ಇದೆಲ್ಲಾ ಪರವಾಗಿದೆ.

ಶ್ರೀ ಆರ್. ವೆಂಕಟಿರಾಮಯ್ಯ.—ಅಧ್ಯಕ್ಷರೆ. ಇದು ಬಹಳ ಅನ್ಯಾಯ ಮಾನ್ಯ ಮಂತ್ರಿಗಳು ಹೊಟ್ಟೆ ತುಂಬಿದ ಜನ ಎಂದು ಏನು ಹೇಳಿದ್ದಾರೆ ಅವನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೆ,* *ಅಂದರೆ ರಾಜ್ಯದ ರೈತನಿಗೆ ಅಪಮಾನ ಮಾಡಿದ ಆದ್ದರಿಂದ ಮಾನ್ಯ ಮಂತ್ರಿಗಳು ಅವರು ಆಡಿದ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ಅವರು ಸಹಕಾರ ಸಂಘದಲ್ಲಿರತಕ್ಕ ಬನುವ್ಯರಿಗೆ ಹೇಳಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ರೈತರು ನಮಗೆ * * ಎಂದು ಹೇಳಿದ್ದು ತಪ್ಪೇ ?

(ಗೊಂದಲ)

ಅಧ್ಯಕ್ಷರು.—ಮಾನ್ಯ ಸದಸ್ಯರನ್ನು ಸಂಬೋಧಿಸಿ ಮಾತನಾಡಿದ್ದರೆ ಸರಿಯಿಲ್ಲ. ಅದನ್ನು ನಾನು ಎಕ್ಸ್‌ಪಂಜ್ ಮಾಡಿಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಮುಖ್ಯಮಂತ್ರಿಗಳು ಹೇಳಿದ್ದನ್ನು ಒಪ್ಪಿ ಕೊಳ್ಳುತ್ತೇವೆ.

ಶ್ರೀ ಬಿ ಎಸ್. ಯಡಿಯೂರಪ್ಪ.—ನಾನು ಒಬ್ಬ ರೈತ, ನನಗೆ ಪೂರ್ಣ ಹೊಟ್ಟೆ ತುಂಬಿದೆಯೇ ? ನನಗೆ ಸಾಲ ಕಟ್ಟಲಿಕ್ಕೆ ಆಗಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಆದೇ ಶಬ್ದವನ್ನು ಉಪಯೋಗಿಸಿದ್ದರೂ, * *ಎಂದು ಹೇಳಿದರೂ ಆಗುವುದಿಲ್ಲ. ಅಧ್ಯಕ್ಷರು ಆಗುತ್ತಾರೆ. ಅವರು ಸಂಬೋಧನೆ ಮಾಡಿರತಕ್ಕದ್ದು ಅಧ್ಯಕ್ಷರಿಗೆ.

(ಗೊಂದಲ)

ಶ್ರೀ ಕೆ. ಟೆಚ್. ಶ್ರೀನಿವಾಸ್.—ಇಲ್ಲಿ ಮಾತನಾಡಿರುವ ಜನ ಬಹಳ ಖಾರವಾಗಿ ಮಾತನಾಡಿದ್ದಾರೆ, * * ಎಂದು ಮಾನ್ಯ ಮಂತ್ರಿಗಳು ಹೇಳಿದರು.

ಶ್ರೀ ಜಿ. ಮಾದೇಗೌಡ.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳಿಗೆ ರುಚಿಯಾಗುವಂತೆ ಹೇಳಬೇಕು ಅಂದರೆ ನಾವು ಹಾಗೆ ಹೇಳುತ್ತೇವೆ.

ಶ್ರೀ ಆರ್. ಎಲ್. ಜಾಲಪ್ಪ.—ಮೊಟ್ಟಮೊದಲನೆಯದಾಗಿ ಬಹಳ ಜನ ಮಾನ್ಯ ಸದಸ್ಯರು ಇದು ಸಣ್ಣ ರೈತನ ಮೇಲೆ ಗದಾ ಪ್ರಹಾರ ಆಗಬಹುದೆಂದು ಸಂಶಯ ವ್ಯಕ್ತಪಡಿಸಿದ್ದಾರೆ. ದಿನಾಂಕ ೧೦ನೇ ಜುಲೈ ೧೯೮೫ ರಂದು ಒಂದು ಆಜ್ಞೆಯನ್ನು ಕಳುಹಿಸಿದ್ದೇನೆ, ಅದನ್ನು ಸಭೆಯ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ.

"Proposal for taking coersive action against small and marginal farmers should be sent to the Government for prior clearance. Such proposal should clearly state all the defaulters, as to whether they are small or medium or marginal farmers in the village. It shuld

* * * Expunged as ordered by the Chair,

also state whether they are wilfull defaulters ? Whether action against such defaulters in the surrounding villages has been taken should also be intimated".

ಇದನ್ನು ನಾನು ಈಗಾಗಲೇ ಕಳುಹಿಸಿದ್ದೇನೆ. ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರಾದ ಮಾದೇಗೌಡರು ಪ್ರಾರಂಭದಲ್ಲಿಯೇ ವಿರೋಧ ಮಾಡುತ್ತೇನೆಂದು ಹೇಳಿ ಬಹಳ ಕಠಿಣವಾದ ಮಾತನ್ನು ಉಪಯೋಗಿಸಿದ್ದಾರೆ. ಮಂಡ್ಯ ಮತ್ತು ಶಿವಮೊಗ್ಗದಲ್ಲಿ ಇರಿಗೇಷನ್ ಜಾಸ್ತಿ ಇದೆ. ಎಲ್ಲೆಲ್ಲಿ ಇರಿಗೇಷನ್ ಜಾಸ್ತಿ ಇವೆ ಅಲ್ಲಿ ನಷ್ಟಗೆ ರಿಕವರಿ ಆಗುತ್ತಿಲ್ಲ. ಇವರು ಮಾತನಾಡುವ ಧಾಟಿ ನೋಡಿದರೆ ವಸೂಲಿ ಮಾಡಿ ಯಾರಿಗೋ ಕೊಡುತ್ತೇವೆಂದು ತಿಳಿದುಕೊಂಡ ಹಾಗೆ ಕಾಣುತ್ತದೆ. ನಾವು ಹಣ ವಸೂಲಿ ಮಾಡಿ ಪುನಃ ರೈತರಿಗೆ ಕೊಡುವುದು. ಬಹಳ ಜನರಿಗೆ ಸಹಕಾರ ಸಂಘದಲ್ಲಿ ಹಣವನ್ನು ಯಾವ ರೀತಿ ಕಟ್ಟುತ್ತಿದ್ದಾರೆ ಎನ್ನುವ ಬಗ್ಗೆ ಕಲ್ಪನೆ ಇದ್ದಹಾಗೆ ಇಲ್ಲ. ಸಬ್ಜಕ್ಟ್ ಟು ಕರೆಕ್ಷನ್. ಇಲ್ಲಿ ಕೊಡುತ್ತಿರುವ ಹಣ ಸರ್ಕಾರದ್ದು ಅಲ್ಲ. ನಾವು ಅಲ್ಪಾವಧಿ ಸಾಲದಲ್ಲಿ ಮಿಡಾರ್ಡ್‌ನಿಂದ ಹಣ ಪಡೆದುಕೊಂಡು ೬೪ ಕೋಟಿ ರೂಪಾಯಿ ಡಿಪಾಸಿಟ್ ಮೊಬಲೈಸ್ ಮಾಡಿ ಹಣ ಕೊಡುತ್ತಿದ್ದೇವೆ. ನಬಾರ್ಡ್‌ನವರಿಗೆ ಸಕಾಲಕ್ಕೆ ಹಣ ವಾಪಸ್ ಕಟ್ಟಬೇಕು ಇಲ್ಲದೇ ಇದ್ದರೆ ಮುಂದಿನ ವರ್ಷ ನಮಗೆ ಮೂರುಕಾಸು ಕೊಡುವುದಿಲ್ಲ. ಡಿಪಾಸಿಟರ್ಸ್ ನಾನು ಸತ್ತರೆ ನನ್ನ ಹೆಂಡತಿ ಮಕ್ಕಳಿಗೆ ಅನುಕೂಲವಾಗಲಿ ಎಂದು ಇರಿಸುತ್ತಾರೆ, ೧೧೦ ಕೋಟಿ ರೂಪಾಯಿ ಇಂಡಿವಿಜ್ಯುಯಲ್ ಡಿಪಾಜಿಟ್ ಇದೆ. ನಾಳೆ ದಿವಸ ಏನಾದರೂ ತೊಂದರೆ ಆದಾಗ ನಾಳೆ ನಮ್ಮ ಯಜಮಾನರಿಗೆ ತೊಂದರೆಯಾಗಿದೆ ದುಡ್ಡು ಕೊಡಿ ಎಂದು ಕೇಳಿದಾಗ ಯಾರಿಗೋ ಸಾಲ ಕೊಟ್ಟಿದ್ದೇವೆ ಇನ್ನು ೧೦ ವರ್ಷ ಬಿಟ್ಟುಕೊಂಡು ಬಾ ಅಂದರೆ ಅವರ ಗತಿ ಏನಾಗಬೇಕು ? ಅದರ ಬಗ್ಗೆ ಮಾನ್ಯ ಸದಸ್ಯರು ಏತಕ್ಕೆ ಯೋಚನೆ ಮಾಡುತ್ತಿಲ್ಲ. ನಾವು ರೈತರ ವಿರೋಧಿಗಳಲ್ಲ ಎಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ. ನಾವು ರೈತರ ವಿರೋಧಿಗಳಾಗಿದ್ದರೆ ಇಷ್ಟೊಂದು ಕನ್‌ಸೇಷನ್ ಕೊಡುತ್ತಾ ಇರಲಿಲ್ಲ. ೧೯೮೨-೮೩ರಲ್ಲಿ ೧೧೪ ಕೋಟಿ ರೂಪಾಯಿ ಸಾಲ ಕೊಟ್ಟಿದ್ದೇವೆ. ೧೯೮೪-೮೫ರಲ್ಲಿ ೧೫೮ ಕೋಟಿ ರೂಪಾಯಿ ಸಾಲ ಕೊಟ್ಟಿದ್ದೇವೆ. ಕಳೆದ ವರ್ಷ ಳ ಬ್ಯಾಂಕುಗಳು ಇನ್‌ವಿಜಿಬಲ್ ಆಗಿದ್ದವು. ಈ ವರ್ಷ ೨೬ಕ್ಕೆ ಇಳಿಸಿದ್ದೇವೆ. ಗುಲ್ಬರ್ಗ, ಹಾಸನ ಬಿಟ್ಟರೆ ಎಲ್ಲಾ ಬ್ಯಾಂಕಂಗಳು ಸಾಲವನ್ನು ಪಡೆಯುವ ಶಕ್ತಿ ಇದೆ. ಭೀಕರ ಕ್ಷಾಮಕ್ಕೆ ತುತ್ತಾಗುವವರಿಗೆ ಸಾಲ ಕೊಡಬೇಕಾದರೆ, ಆ ಶಕ್ತಿ ಹೇಗೆ ಆಯಿತು. ಸಾಲ ವಸೂಲು ಮಾಡಿದ್ದರಿಂದ ಆಯಿತೇ ಹೊರತು ಮಂತ್ರ ಹಾಕುವುದರಿಂದ ಆಗುವುದಿಲ್ಲ ಇದನ್ನು ಅರ್ಥ ಮಾಡಿಕೊಳ್ಳಬೇಕು. ಕೆಲವು ಸದಸ್ಯರು ಮಾತ ಮಾಡುವಾಗ ದೊಡ್ಡ ರೈತರು, ಸಣ್ಣ ರೈತರು ಎಂದು ಹೇಳಿದರು. ನಾಲ್ಕು ಎಕರೆ ಅಡಿಕೆ ತೋಟ ಇದ್ದರೆ ಅವರ ವಾರ್ಷಿಕ ವರಮಾನ ಎಷ್ಟು ಬರುತ್ತದೆ ನೋಡಬೇಕು. ಅದೇ ಎರಡು ಎಕರೆಯಲ್ಲಿ ದ್ರಾಕ್ಷಿ ಇದ್ದರೆ ಅವರ ವಾರ್ಷಿಕ ವರಮಾನ ೩೦ ಸಾವಿರ ಬರುತ್ತದೆ. ಅವನಿಗೆ ಹಣ ಕಟ್ಟಲಿಕ್ಕೆ ಇರುವುದಿಲ್ಲವೇನು? ಟಾಕ್ಟರ್‌ಗಳು ಇಟ್ಟುಕೊಂಡಿರುತ್ತಾರೆ ಅವರು ಹಣ ಕಟ್ಟಲಿಕ್ಕೆ ಆಗುವುದಿಲ್ಲವೇನು? ದುಡ್ಡು ತೆಗೆದುಕೊಂಡಮೇಲೆ ಅವರು ವಾಪಸ್ಸು ಕೊಡುವುದು ಬೇಡವೇ ? ಕೊಟ್ಟವನು ಕೋಡಂಗಿ ಈಸುಕೊಂಡವನು ಈರಭದ್ರ ಅಂದರೆ ಹೇಗೆ? ಈಗ ನಾವು ೧೫೮ ಕೋಟಿ ರೂಪಾಯಿ ಸಾಲ ಕೊಟ್ಟಿದ್ದೇವಲ್ಲ, ಅದರಲ್ಲಿ ಎಷ್ಟು ಪರ್‌ಸೆಂಟ್ ವಸೂಲು ಆಗಿದೆ ಅಂದರೆ ಅಲ್ಪಾವಧಿ ಸಾಲ ೨೫ ಪರ್‌ಸೆಂಟ್, ದೀರ್ಘಾವಧಿ ಸಾಲ ೧೨ ಪರ್‌ಸೆಂಟ್ ವಸೂಲು ಮಾಡಿದ್ದೇವೆ. ಸಹಕಾರ ಸಂಘಗಳು ಸುಸ್ಥಿಯಾಗುತ್ತಿವೆ ಬಡವರು ೧೮-೨೪ ಪರ್‌ಸೆಂಟ್ ಕೊಟ್ಟು ತರುತ್ತಿದ್ದಾರೆ ಅವರ ಗತಿ ಏನು? ಇಷ್ಟೊತ್ತು ೧೫೮ ಕೋಟಿ ರೂಪಾಯಿ ಕೊಟ್ಟಿದ್ದೇವಲ್ಲ ಅದಕ್ಕೆ ಪರ್ಯಾಯ ವ್ಯವಸ್ಥೆ ಯಾವುದು ಇದೆ. ಮಾನ್ಯ ಯಡಿಯೂರಪ್ಪನವರು ಎಕ್ಸಿಕ್ಷನ್ ದೃಷ್ಟಿ ಎಂದು ಹೇಳಿದರು. ಬಡವರಿಗೆ ಅನುಕೂಲ ಆಗದೇ ಇದ್ದರೂ ಅವರು ಓಟು ಕೊಡುತ್ತಿದ್ದಾರೆ, ರೈತರು ದಯಾಶೀಲರು ಓಟು ಕೊಡುತ್ತಾರೆ. ಮಾನ್ಯ ಯಡಿಯೂರಪ್ಪನವರ ಕಾನ್‌ಸ್ಟಿಟ್ಯುಯೆನ್ಸಿಗೆ ಹೋಗಿದ್ದೆ. ಇಡೀ ರಾಜ್ಯದಲ್ಲಿಯೇ worst Bank ಅಂತಿರೆ ಇವರ ಪಿ.ಎಲ್.ಡಿ. ಬ್ಯಾಂಕ್.

ಶ್ರೀ ಬಿ.ಎಸ್. ಯಡಿಯೂರಪ್ಪ.—ಇಡೀ ರಾಜ್ಯದಲ್ಲಿಯೇ ಬರಗಾಲಕ್ಕೆ ತುತ್ತಾಗಿರುವಂತಾದ್ದು ಶಿಕಾರಿಪುರ ತಾಲ್ಲೂಕು.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಮಾನ್ಯ ಸದಸ್ಯರುಗಳ ಕಡೆ ಆ ರೀತಿಯಾಗಿ ಕೈಮಾಡಿ ತೋರಿಸಿ ಕೊಂಡು ಮಾತನಾಡುವುದಕ್ಕೆ ಹೋಗಬೇಡಿ. ಅವರಿಗೆ ಏತಕ್ಕೆ ಅಟ್ಯಾಕ್ ಮಾಡುವುದಕ್ಕೆ ಹೋಗುತ್ತೀರಿ? ಅವರ ಕಡೆ ಕೈ ಮಾಡಬೇಡಿ.

ಶ್ರೀ ಆರ್.ಎಲ್. ಜಾಲಪ್ಪ.—ಕೈ ಬಾಯಿ ಆಡಿಸಬೆ ನಾನು ಬೊಂಬೆ ತರಹ ನಿಂತುಕೊಳ್ಳುವುದಕ್ಕೆ ಆಗತ್ತದೆಯೆ? ೧೯೦-೧೯೦ ಕೊಳವೆ ಬಾವಿಗಳಿಗಾಗಿ ಬ್ಯಾಂಕುಗಳಿಂದ ಸಾಲ ಕೊಟ್ಟಿದ್ದೇವೆ, ೩೦ ಕೊಳವೆಬಾವಿಗಳವರು ಸಾಲ ಕೊಡುವುದು ಬೇಡ ಇನ್ನು ಉಳಿದವರು ಏತಕ್ಕೆ ಸಾಲವನ್ನು ವಾಪಸ್ಸು ಕೊಡಲಿಲ್ಲ? ನಾನು ಈ ಬಗ್ಗೆ ವಿಂಟಿಂಗ್‌ನಲ್ಲಿ ಹೇಳಿದ್ದೇನೆ, ಕೊಟ್ಟ ಸಾಲವನ್ನು ವಸೂಲಿ ಮಾಡುವುದಕ್ಕೆ ಹೋದರೆ, ಇದೊಂದು ಕೆರಾಳ ಶಾಸನವೆಂದು ಹೇಳಿದರೆ ನಾವು ಯಾವರೀತಿ ಸರ್ಕಾರವನ್ನು ನಡೆಸಬೇಕು? ಅದರ ಬಗ್ಗೆ ನನಗೆ ಅರ್ಥವಾಗಲಿಲ್ಲ. ಇದೇರೀತಿ ಹಲವಾರು ವಿಷಯಗಳನ್ನು ಹೇಳಿದ್ದಾರೆ, ಸಹಕಾರ ಸಂಘಗಳನ್ನು ನಡೆಸಿ ಅನುಭವ ಇರುವವರು ಮಾತನಾಡಿದ್ದಾರೆ, ಹೊರಗಡೆ ನಿಂತು ಭಾಷಣ ಮಾಡುವುದನ್ನು ಬಿಟ್ಟರೆ ನಮ್ಮದೇಶದಲ್ಲಿ ಏನೂ ಸಿಗುವುದಿಲ್ಲ. ಮಾನ್ಯ ಸದಸ್ಯರುಗಳು ಬುದ್ಧಿವಂತರಿದ್ದೀರಿ, ಪದವೀಧರರಿದ್ದೀರಿ ತಾವೇ ಯೋಚನೆ ಮಾಡಿ, ಕೊಟ್ಟ ಹಣವನ್ನು ಹಾಗೆಯೇ ಬಿಟ್ಟರೆ ನಾವು ಮುಂದೆ ಯಾವರೀತಿ ಹಣವನ್ನು ಒದಗಿಸಬೇಕು? ಶಿವಮೊಗ್ಗ ಭದ್ರಾವತಿ ಏರಿಯಾಗಳಲ್ಲಿ ಶೇಕಡ ೮೦ರಷ್ಟು ನೀರಾವರಿ ಪ್ರದೇಶವಿದೆ, ಅಲ್ಲಿ ತೆಂಗು, ಭತ್ತ, ಕಬ್ಬು ಈ ರೀತಿ ಎಲ್ಲವನ್ನು ಬೆಳೆಯುತ್ತಾರೆ, ಬೆಳೆಯನ್ನು ಬೆಳೆದರೂ ಕೂಡ ಸಾಲವನ್ನು ಏತಕ್ಕೆ ವಾಪಸ್ಸು ಕೊಡುವುದಿಲ್ಲ? ಕಬ್ಬು ಬೆಳೆಯುವುದರಿಂದ ಹಣ ಬರುವುದಿಲ್ಲವೇನು? ಅವರು ಏತಕ್ಕೆ ಸಾಲವನ್ನು ವಾಪಸ್ಸು ಕೊಡುವುದಿಲ್ಲ? ಉದ್ದೇಶ ಪೂರ್ವಕವಾಗಿ ಸಾಲವನ್ನು ವಾಪಸ್ಸು ಕೊಡುವುದಿಲ್ಲ. ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಕೂಡ ಕೊಟ್ಟಿಲ್ಲವೆಂದು ಅವರೇ ಹೇಳಿದ್ದಾರೆ. ನಾನು ವ್ಯವಸಾಯಗಾರನೆ, ಸಮಯ ಸಿಕ್ಕಿದರೆ ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಹೊಲಗದ್ದೆಗಳಲ್ಲಿ ದುಡಿಯುತ್ತೇನೆ. ಕಷ್ಟಪಟ್ಟು ಬೆಳೆಯನ್ನು ಬೆಳೆಯುತ್ತಿದ್ದೇವೆ. ನಾನು ತೆಗೆದುಕೊಂಡಂತಹ ಸಾಲವನ್ನು ವಾಪಸ್ಸು ಕೊಡುತ್ತಿದ್ದೇನೆ. ನಾನು ಪುಡಾರಿಯಾಗಿದ್ದ ಕಾಲದಲ್ಲಿ ಒಂದು ಸಾರಿ ಮನೆ ಜಪ್ತಿಗೆ ಬಂದಿತ್ತು. ಅದರಲ್ಲಿ ಏನೂ ವಿಶೇಷವಿಲ್ಲ, ಇವತ್ತು ಕಷ್ಟಪಟ್ಟು ದುಡಿದು ಸಾಲವನ್ನು ತೀರಿಸುತ್ತಿದ್ದೇನೆ.

ಶ್ರೀ ಕೆ.ಎಚ್. ಶ್ರೀನಿವಾಸ್.—ಅವತ್ತು ನಿಮ್ಮ ಆಸ್ತಿಯನ್ನು ಹರಾಜು ಹಾಕಿದ್ದರೆ ಏನು ಮಾಡುತ್ತಾ ಇದ್ದಿರಿ?

ಶ್ರೀ ಆರ್. ಎಲ್. ಜಾಲಪ್ಪ.—ಆಗ ನಮ್ಮ ಅಪ್ಪನ ಆಸ್ತಿಯನ್ನು ಮಾರಿ ಕೊಟ್ಟ ಸಾಲವನ್ನು ತೀರಿಸುತ್ತಿದ್ದೆ. ಮಾನ್ಯ ಸದಸ್ಯರಾದ ಬಿಗೆಸ್ವಯವರು ಎರಡು ವರ್ಷಗಳ ವಿಷಯಗಳನ್ನು ಹೇಳಿದ್ದಾರೆ. ಭೂಮಿಯನ್ನು ಹರಾಜು ಹಾಕಿದಾಗ ಯಾರು ಕೊಂಡುಕೊಳ್ಳದಿದ್ದರೆ ಜಿಲ್ಲಾಧಿಕಾರಿಗಳು ಕೊಂಡುಕೊಳ್ಳತಕ್ಕ ಅಧಿಕಾರವನ್ನು ಅವರಿಗೆ ಕೊಟ್ಟಿದ್ದೇವೆ. ಬಿಡ್ಡರ್ಸ್ ಯಾರೂ ಇಲ್ಲದೇ ಇದ್ದಾಗ ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ಕೊಟ್ಟಿದ್ದೇವೆ. ಕಾರಣಾಂತರಗಳಿಂದ ಇದು ಚರ್ಚೆಗೆ ಅವಕಾಶವಾಗಿದೆ. ಭೂಮಿಯನ್ನು ಹರಾಜು ಹಾಕಿದಾಗ ಕೊಂಡುಕೊಳ್ಳುವವರು ಇಲ್ಲದಿದ್ದಾಗ ಜಿಲ್ಲಾಧಿಕಾರಿಗಳು ಕೊಂಡುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಅದೇ ಭೂಮಿಯನ್ನು ಪೀಸ್ ಪೀಸ್ ಮಾಡಿ ೨-೩-೫ ಎಕರೆ ಈ ತರಹ ಮಾಡಿ ಜನಗಳಿಗೆ ಕೊಡಬೇಕೆಂದು ಮಾಡುತ್ತಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ —ಮಂತ್ರಿಗಳು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ ಮಾತನಾಡಿ.

ಶ್ರೀ ಆರ್.ಎಲ್. ಜಾಲಪ್ಪ —ಇದರಲ್ಲಿ ಏನೂ ಇಲ್ಲ ಸ್ವಾಮಿ, ನನ್ನ ಆಸೆ ಇಷ್ಟೆ, ಸಹಕಾರ ಸಂಘಗಳು ಬದುಕಬೇಕು. ಅವು ಉಳಿಯಬೇಕು ಅಧಿಕಾರದಲ್ಲಿ ನಾವು ಇರಲಿ, ನಾಳೆ ನೀವೇ ಬರಬಹುದು. ಕಮ್ಯುನಿಸ್ಟ್‌ನವರು ಬಂದರೆ ಸುಮ್ಮನೆ ಬಿಡುತ್ತಾರೇನು? ಪಶ್ಚಿಮಬಂಗಾಳದಲ್ಲಿ ೧೦ ಸಾವಿರ ರೂಪಾಯಿ ಸಾಲ ಕೊಡದೆ ಇರುವವರನ್ನು ಒಳಗೆ ಹಾಕಿದ್ದಾರೆ. ಹರಿಯಾಣದಲ್ಲಿ ಅದೇರೀತಿ ಮಾಡಿದ್ದಾರೆ. ನಾವು ಏನು ಮಾಡುತ್ತಿದ್ದೇವೆ?

ಶ್ರೀ ಆರ್. ವೆಂಕಟರಾಮಯ್ಯ.—ಅಂತಹದ್ದು ಯಾರೂ ಮಾಡುವುದಿಲ್ಲ.

ಅಧ್ಯಕ್ಷರು.—ಮಂತ್ರಿಗಳು ಉತ್ತರ ಕೊಡಲಿ, ಆಮೇಲೆ ತಾವು ಕ್ಲಾರಿಫಿಕೇಶನ್ ಕೇಳಿ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಮಾದೇಗೌಡರು ಏನು ಹೇಳಿದರು ಅಂದರೆ ಸಾಲ ಕೊಡದ ಪ್ರವೃತ್ತಿ ಜಾಲಪ್ಪನವರು ಬಂದಮೇಲೆ ಬಂತು, ಎಂದು ಹೇಳಿದರು, ಸಾಲ ಸಕಾಲಕ್ಕೆ ಬಂದಿದ್ದರೆ ನಾವು ಸಬ್ಸಿಡಿಯನ್ನು ಏತಕ್ಕೆ ಕೊಡಬೇಕಾಗಿತ್ತು? ಸಾಲ ಬಂದಿಲ್ಲವೆಂದು ತಮಗೆ ಅರ್ಥವಾಗ ವುದಿಲ್ಲವೆ? ದಿವಂಗತ ಅರಸ್‌ರವರು ಇದ್ದಾಗ ಪಿ.ಎಲ್.ಡಿ ಬ್ಯಾಂಕಿನಲ್ಲಿ ೧೪೦ ಕೋಟಿ ರೂಪಾಯಿ ಬಡ್ಡಿಯನ್ನು ಬಿಟ್ಟಿದ್ದಾರೆ. ಇದು ಆದಮೇಲೆ ಗುಂಡೂರಾಯರು ಅಧಿಕಾರಕ್ಕೆ ಬಂದಮೇಲೆ ಸಣ್ಣ ರೈತರ ಸಾಲವನ್ನು ವಜಾ ಮಾಡುತ್ತೇವೆಂದು ಕಾನೂನು ಮಾಡಿದರು. ಕಾನೂನಂ ಪ್ರಕಾರ ಬಿಡಲಿಲ್ಲ. ಸುಮಾರು ೮೫ ಲಕ್ಷ ರೂಪಾಯಿಗಳನ್ನು ಕೊಟ್ಟರೆ ಸಣ್ಣ ರೈತರ ಬಡ್ಡಿಯನ್ನು ಬಿಡುತ್ತೇವೆಂದು ಹೇಳಿ ದರು. ಈ ಕ್ಯಾನ್ಸರ್ ಕಾಯಿಲೆ ನಾನು ಬಂದ ಮೇಲೆ ಉಲ್ಬಣವಾಗಿಲ್ಲ, ಈ ಕಾಯಿಲೆ ಮೊದಲಿನಿಂದಲೂ ಇತ್ತು. ನಾನು ಬಂದು ಉಪಶಮನ ಮಾಡಿದ್ದೇನೆ. ನಾನು ಬಂದಮೇಲೆ ಇದ್ದ ಕ್ಯಾನ್ಸರ್‌ಗೆ ಆಪರೇಷನ್ ಮಾಡಿದ್ದೇನೆ, ಸೆಕೆಂಡ್ ಸ್ಟೇಜ್ ಆವರೇಷನ್ ಮಾಡದಿದ್ದರೆ ರೋಗಿ ಸಾಯುತ್ತಿದ್ದ,

ಶ್ರೀ ಜಿ. ಮಾದೇಗೌಡ —ನೀವು ರೋಗಿಯನ್ನು ಉಳಿಸುವುದಕ್ಕೆ ಆಗುವುದಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ — ವಸೂಲಿ ಮಾಡುತ್ತೇನೆ ಸ್ವಲ್ಪ ಕಾದುನೋಡಿ

SRI K. H. SRINIVAS.—Operation successful, patient collapsed.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಸದಸ್ಯರಾದ ವೆಂಕಟರಾಮಯ್ಯನವರು ಹೇಳಿದರು ತಮಿಳು ನಾಡಿನಲ್ಲಿ, ಆಂಧ್ರಪ್ರದೇಶದಲ್ಲಿ ಮಿಸ್ ಅಪ್ರೋಪ್ರಿಯೇಷನ್ ಆಗುವುದಿಲ್ಲವೆಂದು ಹೇಳಿದರು. ರಾಷ್ಟ್ರವಾಟ್ಟದ ಚರ್ಚೆಗೆ ಹೋದಾಗ, ಬೇರೆ ರಾಜ್ಯಗಳ ವಿಷಯವನ್ನು ಇಲ್ಲಿ ಪ್ರಸ್ತಾಪಮಾಡುವುದು ಬೇಡ, ತಾವು ದಯಮಾಡಿ ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು ನೋಡಿಕೊಂಡು ಬನ್ನಿ. ಸಹಕಾರ ಇಲಾಖೆಯಲ್ಲಿ ಭ್ರಷ್ಟಾಚಾರ ತುಂಬಿದೆ ಎಂದು ೧೦೧ ಕೋಟಿ ರೂಪಾಯಿ ಡಿಫಿಸಿಟ್ ಇದೆ ಎಂದು ಹೇಳಿದರು. ಭ್ರಷ್ಟಾಚಾರ ಎಲ್ಲಿ ಇಲ್ಲ ? ಲೊಕೋಪಯೋಗಿ ಇಲಾಖೆಯಲ್ಲಿ ಭ್ರಷ್ಟಾಚಾರ ಇಲ್ಲವೆ ? ಸಮಾಜ ಕಲ್ಯಾಣ ಇಲಾಖೆಯಲ್ಲಿ ಭ್ರಷ್ಟಾಚಾರ ಇಲ್ಲವೆ ? ಅರಣ್ಯ ಇಲಾಖೆಯಲ್ಲಿ ಇಲ್ಲವೆ ? ಮನುಷ್ಯ ಅಂದಮೇಲೆ ಎಲ್ಲಿ ಭ್ರಷ್ಟಾಚಾರ ಇಲ್ಲ ? ಯಾರೂ ಸತ್ಯ ವಂತರು ಅಲ್ಲ.

SRI K. H. SRINIVAS.—I am grateful to the Hon'ble Minister.

ಅಧ್ಯಕ್ಷರು —ಮಂತ್ರಿಗಳು ಉತ್ತರ ಕೊಡುತ್ತಿದ್ದೀರಿ ? ನೀವು ಸದಸ್ಯರನ್ನು ಅಟ್ಯಾಕ್ ಮಾಡುವುದಕ್ಕೆ ಹೋಗಬೇಡಿ, ಚರ್ಚೆಗಿಂತ ನಿಮ್ಮ ಉತ್ತರ ಜಾಸ್ತಿಯಾಯಿತು.

ಶ್ರೀ ಆರ್.ಎಲ್ ಜಾಲಪ್ಪ.—ನನ್ನ ಅನಿಸಿಕೆ ಇಷ್ಟೆ. ಇದು ನಾನ್ ಆಫಿಶಿಯಲ್ ಮೂವ್‌ಮೆಂಟ್ ಇದರಲ್ಲಿ ಮಿಸ್ ಅಪ್ರೊಪ್ರಿಯೇಷನ್ ಇರುತ್ತದೆ. ೨ ಸಾವಿರ ಕೋಟಿ ರೂಪಾಯಿ ವರ್ಕಿಂಗ್ ಕ್ಯಾಪಿಟಲ್ ಇರತಕ್ಕದ್ದರಲ್ಲಿ ಐದಾರು ಪರ್ಸೆಂಟ್ ಮಿಸ್ ಅಪ್ರೊಪ್ರಿಯೇಷನ್ ಆದರೆ ಏನೂ ಅನಿಸುವುದಿಲ್ಲ. ಈಗ ಆಫಿಶಿಯಲ್ ಮತ್ತು ನಾನ್ ಆಫಿಶಿಯಲ್‌ಗಳ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇವೆ. ನಾನ್ ಆಫಿಶಿಯಲ್ ಮೇಲೆ ಕ್ರಿಮಿನಲ್ ಕೇಸ್ ಹಾಕುತ್ತಿದ್ದರು, ಅಧಿಕಾರಿಗಳ ಮೇಲೆ ಕೇಸು ಹಾಕುತ್ತಿದ್ದರು. ಹಿಂದೆ ಮಿಸ್ ಅಪ್ರೊಪ್ರಿಯೇಷನ್‌ನಲ್ಲಿ ಇನ್‌ವಾಲ್ವ್ ಆದವರಿಗೆ ನಾನ್ ಆಫಿಶಿಯಲ್ಸ್ ಕಮಿಟಿ ಸೂಪರ್‌ಸೀಡ್ ಆಗುತ್ತಿತ್ತು, ಅಧಿಕಾರಿಗಳಿಗೆ ಪ್ರಮೋಷನ್ ಕೊಡುವುದು ಇತ್ತು. ನಾವು ಈಗ ಅಧಿಕಾರಿಗಳನ್ನು ಹಿಡಿತದಲ್ಲಿಟ್ಟುಕೊಳ್ಳಲಿಕ್ಕೆ ಹೊರಟಿದ್ದೇವೆ. concerned officer is also responsible. ಎಂದು ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಪಕ್ಷಪಾತ ಮಾಡುವು ದಕ್ಕೆ ನಮ್ಮ ಹತ್ತಿರ ' ಫುಟೋದ್ಗಜನ ಗದೆ ' ಇದ್ದಿದ್ದರೆ ಮಾಡುತ್ತಿದ್ದೆವು. ಈ ಕಾನೂನಿನಿಂದ ಮಿಸ್ ಅಪ್ರೊಪ್ರಿಯೇಷನ್ ತಪ್ಪಿಸಲಿಕ್ಕೆ ಸಾಧ್ಯವಿದೆ. ಸಹಕಾರ ಕ್ಷೇತ್ರದಲ್ಲಿ ಲಕ್ಷಾಂತರ ಬಾವಿಗಳನ್ನು ಮಾಡಿಸಿದ್ದೇವೆ. ಸಾವಿರಾರು ಎಕರೆ ತೆಂಗಿನತೋಟಗಳು ಬರುತ್ತಿವೆ. ಇಪತ್ತು ನೂರಕ್ಕೆ ೭೦ರಷ್ಟು ಕ್ಯಾಂಪ್ಕೋ ಅಡಿಕೆ ವ್ಯಾಪಾರ ಇಡೀ ರಾಷ್ಟ್ರದಲ್ಲಿ ಕೆಲಸ ಮಾಡುತ್ತಿದೆ. ಅಲ್ಲಿ ಯಾರೋ ತಿಂದು ಹಾಕಿದರೆ ಅದನ್ನು ಇಲ್ಲಿ ಹೇಳಿದರೆ ನಮ್ಮ ಸಹಕಾರ ಆಂದೋಳನಕ್ಕೆ ತೊಂದರೆಯಾಗುತ್ತದೆ. ನಾನೊಂದು ಭರವಸೆಯನ್ನು ಕೊಡುತ್ತಿದ್ದೇನೆ, ಸಣ್ಣ ರೈತರ ಹಿತಾಸಕ್ತಿಯನ್ನು ನಾವು ನೋಡಿಕೊಳ್ಳುತ್ತೇವೆ. ಕಾನೂನು ಮಾಡುವಾಗ ಇವನ್ನೆಲ್ಲಾ ಆಳವಡಿಸಿಕೊಳ್ಳುತ್ತೇವೆ. ಸಣ್ಣ ರೈತರ ಜಮೀನು ಕಿತ್ತುಕೊಂಡ್

ಬಿಟ್ಟರೆ ಅಂದರೆ, ರಾಷ್ಟ್ರದಲ್ಲಿ ಸಣ್ಣ ರೈತರು ಒಂದು ಎಕರೆ ಭೂಮಿ ಇಟ್ಟು ಕೊಂಡಿರುವವರು ಅದರಲ್ಲಿ ದ್ರಾಕ್ಷಿ ಬೆಳೆದರೆ ಹಣ ಬರುವುದಿಲ್ಲವೆ ? ತೆಂಗಿನ ಗಿಡ ಹಾಕಿದರೆ ಅದರಿಂದ ಹಣ ಬರುವುದಿಲ್ಲವೆ ? ಒಂದು ಕಾಯಿಗೆ ೧ ರೂಪಾಯಿನಂತೆ ಕೊಟ್ಟರೂ ಸಹ ಸಾವಿರ ತೆಂಗಿನ ಕಾಯಿಗೆ ೧ ಸಾವಿರ ರೂಪಾಯಿ ಬರುತ್ತದೆ ಕಬ್ಬು ಬೆಳೆಯನ್ನು ಬೆಳೆಯುವವರು ಸಹ ತೆಗೆದುಕೊಂಡಂತಹ ಸಾಲವನ್ನು ವಾಪಸ್ಸು ಕೊಡದಿದ್ದರೆ ಸಂಸ್ಥೆಯನ್ನು ಹೇಗೆ ನಡೆಸುವುದು ? ಸಂಸ್ಥೆಯನ್ನು ಸಣ್ಣ ರೈತರ ಹಿತದೃಷ್ಟಿಯಿಂದ ನಡೆಸುತ್ತಿದ್ದೇವೆ. ಕೊಟ್ಟ ಸಾಲವನ್ನು ವಸೂಲಿ ಮಾಡಿದರೆ ಮಾನ್ಯ ಹೆಗಡೆಯವರ ಮನೆಗೆ, ನಮ್ಮ ಮನೆಗೆ ಅದು ಬರುವುದಿಲ್ಲ ದಯಮಾಡಿ ಮಾನ್ಯ ಸದಸ್ಯರು ಈ ಮಸೂದೆಯನ್ನು ಒಪ್ಪಿಕೊಳ್ಳಬೇಕು. ಇದರಲ್ಲಿ ಏನೇ ಎಡರುತೊಡರುಗಳು ಇದ್ದರೂ ರೂಲ್ಸ್ ಮಾಡುವಾಗ ಸರಿಪಡಿಸಿಕೊಳ್ಳುತ್ತೇವೆ. ತೂಕವಾದ ರೂಲ್ಸ್ ಅನ್ನು ಮಾಡಿ ಜಾರಿಗೆ ಕೊಡುತ್ತೇವೆ ಎನ್ನುವ ಭರವಸೆಯನ್ನು ಕೊಡುತ್ತೇನೆ.

ಶ್ರೀ ಎಸ್. ರೇವಣಸಿದ್ದಯ್ಯ — ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹೇಳುತ್ತಿದ್ದರು ರೈತ ಕಷ್ಟಪಟ್ಟು ದುಡಿದರೆ ಸಾಲವನ್ನು ಪಾಪಸ್ಸು ಕೊಡಬಹುದು ಎನ್ನುವ ಅರ್ಥದಲ್ಲಿ ಹೇಳುತ್ತಿದ್ದರು. ಅದರ ಅರ್ಥ ರೈತ ಕಷ್ಟಪಟ್ಟು ದುಡಿಯುತ್ತಿಲ್ಲ ಎನ್ನುವ ಹಾಗೆ ಆಗುತ್ತದೆ. ರೈತನ ಆಗೆ ಕಷ್ಟಪಡ ತಕ್ಕವರು ಜಗತ್ತಿನಲ್ಲಿ ಯಾರು ಇಲ್ಲ, ಮಂತ್ರಿಗಳು ಹೇಳಿದ ಮಾತನ್ನು ನಾನು ಒಪ್ಪುವುದಿಲ್ಲ. ರೈತರಿಗೆ ಅನೇಕ ಕುಂದುಕೊರತೆಗಳು ಇವೆ. ಈಗ ಅನೇಕ ಬೆಲೆಗಳು ಕುಸಿದುಹೋಗಿವೆ ನಾನು ಒಂದು ವಿಷಯವನ್ನು ಸ್ಪಷ್ಟ ಮಾಡುತ್ತೇನೆ. ಈಗ ಸರ್ಕಾರ ಅನೇಕ ಪದಾರ್ಥಗಳಿಗೆ ಬೆಲೆಗಳನ್ನು ನಿಗದಿ ಮಾಡಿದೆ, ಸರ್ಕಾರ ಬೆಲೆಯನ್ನು ೨೦೦ ರೂಪಾಯಿ ನಿಗದಿ ಮಾಡಿದ್ದರೆ ರೈತನಿಗೆ ಸಿಗತಕ್ಕದ್ದು ೧೦೦ ರೂಪಾಯಿ ಮಾತ್ರ. ಕಬ್ಬಿಗೆ ೨೦೦ ರೂಪಾಯಿ ಕೊಡುತ್ತೇವೆಂದು ಹೇಳುತ್ತಾರೆ. ಆದರೆ ನಮಗೆ ಸಿಗತಕ್ಕದ್ದು ೧೦೦ ರೂಪಾಯಿ. ರೈತ ದುಡಿಯುವುದಿಲ್ಲ ಅಂದರೆ ನಾನು ಒಪ್ಪುವುದಿಲ್ಲ. ರೈತ ಕಷ್ಟಪಟ್ಟು ಹೊಟ್ಟೆ ಬಟ್ಟೆಗೆ ಇಲ್ಲದೆ ದುಡಿದು ಮಿತವ್ಯಯ ಮಾಡಬೇಕೆಂದು ಹೇಳುತ್ತಾರೆ, ಆದರೆ ಹೆಚ್ಚು ಬೆಲೆಯನ್ನು ಕೊಡಬೇಕು. ರೈತ ಕಷ್ಟಪಟ್ಟು ದುಡಿಯುವುದಿಲ್ಲ ಎನ್ನುವುದು ಸರಿಯಲ್ಲ.

ಶ್ರೀ ಆರ್. ಎಲ್. ಜಾಲಪ್ಪ — ರೈತ ಕಷ್ಟಪಟ್ಟು ದುಡಿಯುವುದಿಲ್ಲವೆಂದು ನಾನು ಹೇಳುವುದಿಲ್ಲ; ಕಷ್ಟಪಟ್ಟು ದುಡಿದು ಹಣ ಕೊಡುವುದಿಲ್ಲವೆಂದು ಹೇಳಿದ್ದೇನೆ. ಕಷ್ಟಪಟ್ಟು ದುಡಿದು ಹಣ ಸಂಪಾದನೆ ಮಾಡುತ್ತಿದ್ದಾರೆ. ದೊಡ್ಡ ದೊಡ್ಡ ರೈತರು ಸಂಪಾದನೆ ಮಾಡುತ್ತಿದ್ದಾರೆ ದುಡಿದು ವಾಪಸ್ಸು ಕೊಡಿಯೆಂದು ಕೇಳುತ್ತಿದ್ದೇನೆ.

ಶ್ರೀ ಎಸ್. ರೇವಣಸಿದ್ದಯ್ಯ — ನೂರಕ್ಕೆ ಒಬ್ಬರು ಆ ತರಹ ಇರಬಹುದು.

ಶ್ರೀ ಆರ್. ಎಲ್. ಜಾಲಪ್ಪ — ಮಾನ್ಯ ಸದಸ್ಯರು ರೈತರಿಗೆ ಸರಿಯಾದ ಬೆಲೆ ಸಿಗುವುದಿಲ್ಲವೆಂದು ಹೇಳಿದರು. ಅವರಿಗೂ ಗೊತ್ತಿದೆ. ಬೆಲೆ ನಿಗದಿಯನ್ನು ಕೇಂದ್ರಸರ್ಕಾರದವರು ಮಾಡಬೇಕಾಗುತ್ತದೆ. ಬೆಲೆ ಜಾಸ್ತಿಮಾಡಲಿಕ್ಕೆ ಹಸಿರು ಬಾವುಟ ಹಿಡಿದುಕೊಂಡು ಬರಲಿಕ್ಕೆ ನಾನೂ ಕೂಡ ತಯಾರಾಗಿದ್ದೇನೆ. ಕಂಡೀರ ಹಣ ವಾಪಸ್ಸು ಕೊಡಿ ಸ್ವಾಮಿ. ಬೆಲೆ ಜಾಸ್ತಿ ಮಾಡಿಯೆಂದು ಕೇಳುವುದಕ್ಕೆ ನಾನು ಬರುತ್ತೇನೆ. I am prepared for that agitation. ನಾನು ಅದರೊಳಗೆ ಇದ್ದವನು, ನಾನು ಬೆಂಗಳೂರಿನಲ್ಲಿ ಆರ್ಗನೈಜ್ ಮಾಡಿದ್ದೇನೆ. ನಗರುಂದ ನವಲಗುಂದ ಚಳುವಳಿ ನಡೆದಾಗ ಅದರಲ್ಲಿ ನಾನು ಇದ್ದೆ. ಮಾನ್ಯ ಬೊಮ್ಮಾಯಿಯವರ ಕಮಿಟಿಯಲ್ಲಿದ್ದೆ. ರೈತರು ಕಷ್ಟಪಡುವುದಿಲ್ಲವೆಂದು ನಾನು ಹೇಳುವುದಿಲ್ಲ. ಕಷ್ಟಪಟ್ಟು ದುಡಿಯುತ್ತಾರೆ, ಕೆಲವರು ನಮ್ಮ ಹಣವನ್ನು ವಾಪಸ್ಸು ಕೊಡುವುದಿಲ್ಲ. ಕ್ಷಾಮಡಾಮರಗಳು ಬಂದಾಗ ೨೪ ಕೋಟಿ ರೂಪಾಯಿಗಳನ್ನು ಕನ್‌ವರ್ಷನ್ ಮಾಡಿದ್ದೇವೆ. ಈಗ ಮಳೆಯಿಲ್ಲವೆಂದು ಕೇಳುತ್ತಿದ್ದಾರೆ. ಹೋದವರ್ಷದ್ದು ಸಾಲಕೊಡಿಯೆಂದು ಕೇಳುತ್ತಿದ್ದೇವೆ. ಈ ವರ್ಷದ ಸಾಲವನ್ನು ನಾವು ಕೇಳುವುದಿಲ್ಲ. There will be three months time given for conversion. If farmer pays back the dues, the lands will be handed over to him. If he does not pay, it will be conferred in the name of the Deputy Commissioner. He will see it is evicted and see that it is disposed off in public auction.

ಶ್ರೀ ಬಿ. ಎಸ್. ಯಡಿಯೂರಪ್ಪ —ಇದು ರೈತ ವಿರೋಧಿ ಕರಾಳ ಶಾಸನ, ರೈತರಿಗೆ ಅನ್ಯಾಯ ವಾಗುತ್ತಿದೆ, ರೈತರ ಕೊಲೆ ಮಾಡತಕ್ಕ ಶಾಸನ ಇದನ್ನು ನಾನು ಪ್ರತಿಭಟನೆಮಾಡಿ ವಾಕ್‌ಔಟ್ ಮಾಡುತ್ತೇನೆ.

(ಈ ಸಂದರ್ಭದಲ್ಲಿ ಕೆಲವು ಸದಸ್ಯರು ಸಭಾ ತ್ಯಾಗ ಮಾಡಿದರು)

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ೧೯೫೫ನೇ ಇಸವಿಯ ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರು ೨ನೇ ತಿದ್ದುಪಡಿಯನ್ನು ಮಂಡಿಸಬೇಕು.:

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ, ನನ್ನ ತಿದ್ದುಪಡಿಯಿಂದ ಅತಿ ಸಣ್ಣ ರೈತರು ಸಣ್ಣ ರೈತರು ಇವರಿಗೆ ಅನುಕೂಲವಾಗುತ್ತದೆ ಆದುದರಿಂದ ಇದನ್ನು ರೂಲ್ಸ್‌ನಲ್ಲಿ ಅಳವಡಿಸ ಬೇಕೆಂದು ಕೋರುತ್ತೇನೆ ತಾವು ಏನು ಹೇಳಿದ್ದೀರಿ ಅದನ್ನೆ ನಾನು ಕೂಡ ತಂದಿದ್ದೇನೆ, ದಯವಿಟ್ಟು ಸದಪ ಅದನ್ನು ಒಪ್ಪಿಕೊಳ್ಳಬೇಕು.

Sir, I beg to move that.

"After sub-clause (3) of Clause-2, the following new sub clause shall be added.

(4) This provision does not apply to the land holders who have landed property of 10 acres and small farmers and marginal farmers who have mortgaged the lands to co-operative Societies and Land Mortgage Banks."

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೆ, ಯಾರಿಗೆ ಹಣ ಕೊಡುವುದಕ್ಕೆ ಶಕ್ತಿ ಇಲ್ಲವೋ ಯಾರು ೫ ಎಕರೆಗಿಂತ ಕಡಿಮೆ ಭೂಮಿಯನ್ನು ಇಟ್ಟುಕೊಂಡಿದ್ದಾರೆ, ಯಾರು ಒಂದೆರಡು ಎಕರೆ ಭೂಮಿ ಇಟ್ಟುಕೊಂಡಿದ್ದಾರೆ ಅವರಿಗೆ ತೊಂದರೆಯಾಗುವುದಿಲ್ಲ. ಮಾನ್ಯ ಸದಸ್ಯರಾದ ಕೆ. ಎಚ್. ಪಾಟೀಲ್ ಹೇಳಿದರು ಸಣ್ಣ ರೈತರಿಗೆ ತಗಾದೆಯಾಗುತ್ತದೆಂದು ಹೇಳಿದ್ದಾರೆ. ಅಡಿಕೆ ತೋಟ, ದ್ರಾಕ್ಷಿ ತೋಟ, ತೆಂಗಿನ ತೋಟ ಇಟ್ಟುಕೊಂಡಿರುವರು ಸಾಲ ವಾಪಸ್ ಕೊಡದಿದ್ದರೆ ಅಂತಹವರಿಂದ ವಸೂಲಿ ಮಾಡ ದಿದ್ದರೆ ನಾವು ಸಹಕಾರ ಸಂಘಗಳನ್ನು ನಡೆಸುವುದಕ್ಕೆ ಆಗುವುದಿಲ್ಲ. ಈಗ ಬೋರ್‌ವೆಲ್‌ಗಳನ್ನು ಹಾಕಿಕೊಳ್ಳಲಿಕ್ಕೆ ೩೫ ಸಾವಿರ ರೂಪಾಯಿ ಸಾಲ ಕೊಡುತ್ತಿದ್ದೇವೆ. ದ್ರಾಕ್ಷಿ ತೋಟ ಮಾಡುವವರಿಗೆ, ೧ ಎಕರೆ ಭೂಮಿ ಇರುವವರಿಗೆ ೩೦ ಸಾವಿರ ರೂಪಾಯಿ ಸಾಲ ಕೊಟ್ಟಿದ್ದೇವೆ. ಆದರಲ್ಲಿ ಅವರಿಗೆ ೬೦-೭೦ ಸಾವಿರ ರೂಪಾಯಿ ಹಣ ಬರುತ್ತದೆ, ಅವರು ಹಣವನ್ನು ವಾಪಸ್ ಕೊಡಬೇಕಾಗುತ್ತದೆ. ಈ ಒಂದು ತಿದ್ದುಪಡಿಯನ್ನು ಒಪ್ಪುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾ ಮಾನ್ಯ ಸದಸ್ಯರು ಮಂಡಿಸಿದ ತಿದ್ದುಪಡಿಯನ್ನು ವಾಪಸ್ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

MR SPEAKER.—The question is.

"After sub-clause (3) of Clause-2, the following new sub-clause shall be added.

"(4) This provision does not apply to the land holders who have landed property of 10 acres and small farmers and marginal farmers who have mortgaged the lands to co-operative Societies and Land Mortgage Banks."

(ಶ್ರೀ ಆರ್. ವೆಂಕಟರಾಮಯ್ಯನವರ ತಿದ್ದುಪಡಿ ಬಿದ್ದುಹೋಯಿತು.)

ಅಧ್ಯಕ್ಷರು.—"ಖಂಡ ೨ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು

ಖಂಡ ೩ ರಿಂದ ೧೧ರ ವರೆಗೆ

ಅಧ್ಯಕ್ಷರು.—"೩ ರಿಂದ ೧೧ನೇ ಖಂಡಗಳು ವಿಧೇಯಕದ ಅಂಗವಾಗಿರುತ್ತವೆ."

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

(ಖಂಡ ೩ರಿಂದ ೧೧ರ ವರೆಗಿನ ಖಂಡಗಳು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ "ಮೊದಲನೇ ಖಂಡ, ಧೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ಧೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂಕ್ತ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು),

ಪ್ರಸ್ತಾವದ ಅಂಗೀಕಾರ

ಶ್ರೀ ಆರ್. ಎಲ್. ಜಾಲಪ್ಪ —(ಸಹಕಾರ ಸಚಿವರು) "೧೯೮೫ನೇ ಇಸವಿಯ ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ೧೯೮೫ನೇ ಇಸವಿಯ ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮಂತ್ರಿ ಮಂಡೂದೆಗೆ ಒಪ್ಪಿಗೆ ನೀಡಲಾಯಿತು

೬-೦೦ ಪಿ.ಎಂ.

ಮಂತ್ರಿಯವರಿಂದ ಹೇಳಿಕೆ

ರಾಜ್ಯದಲ್ಲಿನ ಅಭಾವ ಪರಿಸ್ಥಿತಿಯ ಬಗ್ಗೆ

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು ಮತ್ತೊಮ್ಮೆ ಅಭಾವ ಪರಿಸ್ಥಿತಿಯ ಬಗ್ಗೆ ಹೇಳಿಕೆ ನೀಡುತ್ತೇವೆಂದು ಹೇಳಿದ್ದರು. ಅವರ ಪರವಾಗಿ ನಾನು ಈ ಕೆಳಗಿನ ಹೇಳಿಕೆಯನ್ನು ತಮ್ಮ ಅನುಮತಿ ಕೋರಿ ಸಭೆಯ ಮುಂದೆ ನೀಡಬಯಸುತ್ತೇನೆ.

ಈ ಸದನದ ಮಾನ್ಯ ಸದಸ್ಯರಿಗೆ ತಿಳಿದಿರುವ ಹಾಗೆ ನಾನು ದಿನಾಂಕ ೨೨-೭-೮೫ರಂದು ಈ ಸದನದಲ್ಲಿ ರಾಜ್ಯದಲ್ಲಿರುವ ಅಭಾವ ಪರಿಸ್ಥಿತಿ ಮತ್ತು ಈ ಪರಿಸ್ಥಿತಿಯನ್ನು ಎದುರಿಸಲು ರಾಜ್ಯ ಸರ್ಕಾರವು ಹಾಕಿಕೊಂಡ ಕಾರ್ಯಕ್ರಮಗಳ ಬಗ್ಗೆ ಒಂದು ದೀರ್ಘವಾದ ಹೇಳಿಕೆಯನ್ನು ನೀಡಿದ್ದೇನೆ. ಇದಾದ ನಂತರ ನಾನು ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಜಿಲ್ಲೆಯ